Mysore Land Revenue (Surcharge) (Amendment) Bill, 1963. Introduced.

Sri M. V. KRISHNAPPA (Minister for Revenue).—I beg to introduce :—

The Mysore Land Revenue (Surcharge) (Amendment) Bill, 1963.

Mr. SPEAKER.—The Mysore Land Revenue (Surcharge) Amendment) Bill, 1963 is introduced.

NON-OFFICIAL RESOLUTION

Implementation of the decision of the Supreme Court *re* : Reservation in Government Services in respect of Backward classes and Scheduled caste.

(*Debate continued*)

Mr. SPEAKER.—I would like to remind the House that 10 members have concluded their speeches on the resolution moved by Sri J. P. Sarwesh and the 11th Member was Sri L. B. Birje. He has already taken 5 minutes and he has to conclude now. The time allotted was 2 hours and the time taken was 2 hours. It was extended by half-an-hour. Out of that 5 minutes have already been taken by Sri L. B. Birje who has to conclude his speech.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಚಂದ್ರಶೇಖರಪುರ).—ಸ್ವಾಮೀ, ಈ ನಿರ್ಣಯದ ಮೇಲೆ ಇನ್ನೂ ಬಹಳ ಜನ ಮಾತನಾಡಬೇಕು ಎಂದಿರುವುದರಿಂದ ಇದಕ್ಕೆ ಇನ್ನೂ ಹೆಚ್ಚು ಕಾಲ ಬೇಕಾಗಿದೆ. ಆದುದರಿಂದ ಈ ದಿವಸವೆರ್ಲಾ ಪೂರ್ತಿಯಾಗಿ ಇದರ ಚರ್ಚೆಗೋಸ್ಕರ ಏನಿಯೋಗಿಸಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—Allright; Now Sri L. A. Birje will continue.

Sri L. B. BIRJE (Khanapur).—[Spoke in Marathi].

ಶ್ರೀಮತಿ ರತ್ನವ್ಮ ಮಾಧವರಾವ್ (ಶಿವಮೊಗ್ಗ).— ನನ್ಮಾನ್ಯ ಸಭಾಪತಿಗಳೆ, ಈ ಸಭೆಯಮುಂದೆ ತಂದಿರುವ ಮಾನ್ಯಸ್ನೇಹಿತ ಸರ್ವೇಶ್ರವರ ನಿರ್ಣಯವನ್ನು ಅನುಮೋದಿಸುತ್ತಾ ನನ್ನ ಅಭಿಪ್ರಾಯದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದಿದ್ದೇನೆ. ಈ ನಿರ್ಣಯವನ್ನು ತರುವಾಗ ನನಗೆ ಏನು ಅನಿಸುತ್ತಾ ಇದೆಯೆಂದರೆ, ಇದರ ಮೂಲಕ ಏನನ್ನು ಒತ್ತಾಯಮಾಡುತ್ತಿದ್ದಾರೆಯೋ, ಅದನ್ನು ಸರ್ಕಾರ ಅನುಸರಿಸಿಕೊಂಡು ಬರುತ್ತಾ ಇದೆಯೆಂದು ಇದುವರೆಗೆ ನನ್ನ ಅಭಿಪ್ರಾಯ ಇದೆ. ಈ ನಿರ್ಣಯದಲ್ಲಿ ತಂದಿರುವುದನ್ನು ನೋಡಿದರೆ ಏನೋ ಹೆಚ್ಚುಕಡಿಮೆ ಆಗಿರಬೇಕೆಂದು ನನಗನ್ನಿಸುತ್ತಿದೆ; ಹಾಗೆ ಆಗಿದ್ದರೆ ಏನೆಂಬುದನ್ನು ಮಾನ್ಯಮಂತ್ರಿಗಳು ಆಗಿಲ್ಲದಿದ್ದರೆ ಇಲ್ಲವೆಂಬುದನ್ನು ಉತ್ತರದಲ್ಲಿ ತಿಳಿಸಬೇಕು.

ಈ ವಿಧಾನ ಸಭೆಯಲ್ಲಿ ಪ್ರಶ್ನೋತ್ತರಕಾಲದಲ್ಲಿ ಅಪಾರ ಪ್ರಶ್ನೆಗಳಿಗೆ ಉತ್ತರ ಕೊಟ್ಟಿರುವುದನ್ನೆರ್ಲಾನೋಡಿದರೆ, ಇಲ್ಲಿ ಕೇಳುತ್ತಿರುವುದು ನರವೇರಿ, ಈಗರೇ ಆಚರಣೆಯಲ್ಲರಬೇಕೆಂದು ಅನಿಸುತ್ತದೆ. ಆಂಥದರಲ್ಲಿ ನನಗೆ ಈಗ ಏನೂ ಅರ್ಥವಾಗುತ್ತಿಲ್ಲ. ಸರಕಾರ ಹರಿಜನರಿಗೆ ತುಂಬ ಉಪಕಾರ ಮಾಡುತ್ತಿದೆ ಎಂದು ಒಂದುಕಡೆ ವಾದವಿದೆ. ಈ 17 ಆಫೀಸರುಗಳು ರಿವರ್ಟ್ ಆದ ಬಗ್ಗೆ ಪ್ರಶ್ನೋತ್ತರಕಾಲದಲ್ಲಿ ಕೊಟ್ಟ ಉತ್ತರ ಕೇಳಿ ಏನೋ ಅನ್ನಿಸಿತು; ಇದರ ವಿಷಯ ಏನು ? ಕೂಲಂಕಷವಾಗಿ ತಿಳಿಸಿ. ಈ ವೆರ್ಫೇರ್ ಆಫೀಸುಗಳಲ್ಲಿ ಜೀಪ್ ಇದ್ದರೆ, ಕಾರ್ ಇರುವುದಿಲ್ಲ,

(ಶ್ರೀಮತಿ ರತ್ನಮ್ಮ ಮಾಧವರಾವ್)

ಕಾರ್ ಇದ್ದರೆ ಜೀಪ್ ಇಲ್ಲ; ಏನೇನೋ ಆಗಿ ಹೋಗುತ್ತದೆಂದು ಹೇಳಿ ಮಾನ್ಯ ಸದಸ್ಯರು ಇಲ್ಲಿ ಮಾತನಾಡಿದರು. ಇದರ ವಿಷಯವೇನು, ಅದು ನನಗೆ ಅನುಮಾನವಾಗಿದೆ.

ಆಮೇಲೆ ಈ ವೆಲ್‌ಫೇರ್ ಇಲಾಖೆಯಲ್ಲಿ ಡೈರೆಕ್ಟರುಗಳು, ಇನ್‌ಸ್ಪೆಕ್ಟರುಗಳು ಎಂದು ಏನು ಅಧಿಕಾರಿಗಳಿದ್ದಾರೋ, ಅವರೆಲ್ಲಾ ಷೆಡ್ಯೂಲ್ಡ್ ಕ್ಯಾಸ್ಟ್‌ಗಳಿಗೆ ಸೇರಿದವರೆ ಇದ್ದಾರೆಯೇ? ಅಥವ ಬೇರೆಯವರಿದ್ದಾರೆಯೋ ? ಈ ಇಲಾಖೆಗೆ ಸರ್ಕಾರ ತುಂಬ ದುಡ್ಡು ಖರ್ಚುಮಾಡುತ್ತಿದೆ ಅನ್ನುವ ಪಾದ ಒಂದುಕಡೆಇದೆ. ಒಂದು, ಎರಡು, ಮೂರು ಯೋಜನೆಗಳಲ್ಲಿ ಲಕ್ಷಾಂತರರೂಪಾಯಿ ಮೇಲಿಂದ ಕೆಳಗಿನವರೆಗೆ ಖರ್ಚಾಗಿದೆ. ಈ ಹಣ ಎಲ್ಲಾ ಏನಾಯಿತು ? ಯಾವುದಾದರೂ ಪ್ರಶ್ನೆ ಕಳುಹಿಸಿದರೆ, ಅವರಿಗೇ ಕೊಟ್ಟಿ ಅವರ ಮನೆ ಅರ್ಧ ಆಗಿದೆ ಎಂದು ಉತ್ತರ ಕೊಡುತ್ತೀರ. ಇವರ ಏಳಿಗೆಗೆ ಇಟ್ಟಹಣ ಏತಕ್ಕೆ ಖರ್ಚಾಯಿತು, ಏನಾಯಿತು ಅನ್ನುವುದನ್ನು ತಿಳಿಸಬೇಕು. ಈ ಹೌಸಿಂಗ್ ಸ್ಕೀಮ್ ಅಂತ ಹೊಸದಾಗಿ ಆದುದರಲ್ಲಿ ಏನೇನು ಕೆಲಸವಾಗಿದೆ. ತಾವು ಮಂತ್ರಿಗಳಾದ ಮೇಲೆ ಏನೇನು ಮಾಡಿದ್ದೀರಿ ಎಂದು ತಾವು ಉತ್ತರ ಕೊಡುವಾಗ ತಿಳಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ.

ಇವರ ಕೆಲವು ಹಾಸ್ಟಲುಗಳು ಸರಿಯಾಗಿ ನಡೆಯುತ್ತಾ ಇಲ್ಲ; ಹಣವಿದ್ದರೆ, ಹುಡುಗರಿಲ್ಲ, ಹುಡುಗರಿದ್ದರೆ ಹಣವಿಲ್ಲ. ಇವೆರಡೂ ಇದ್ದರೆ ಊಟತಿಂಡಿ ಸರಿಯಾಗಿಲ್ಲ, ಎಂದು ಹೀಗೆಲ್ಲಾ ಹೇಳುತ್ತಾ ಇದ್ದಾರೆ. ಇದರ ವಿಷಯವೇನು ? ಇದರಲ್ಲಿ ನಿಮ್ಮ ಮಾಹಿತಿ ಏನು ? ಈ ಜನಾಂಗಕ್ಕೆ ಅನ್ಯಾಯವಾಗುತ್ತಿದೆ ಅನ್ನುವ ಕೂಗು ಹೋಗಬೇಕು. ಏಕೆಂದರೆ ಮಹಾತ್ಮ ಗಾಂಧಿಯವರು ಈ ಲಕ್ಷಾಂತರ ಜನ ಹಿಂದುಳಿದವರ ಏಳಿಗೆಗಾಗಿ ತುಂಬಾ ದುಡಿದಿದ್ದಾರೆ. ನಾವು ಅವರ ಅನುಯಾಯಿಗಳಾಗಿರುವಾಗ, ಈ ಜನಾಂಗಕ್ಕೆ ಅನ್ಯಾಯವಾಗಿದೆ ಎಂಬ ದೂರು ಬರಬಾರದು. ಈ ಬಗ್ಗೆಯೂ ತಾವು ವಿವರಗಳನ್ನು ಕೊಡಬೇಕು.

ಈ ಜನಾಂಗದ ಸೋಶಿಯೋ ಎಕನಾಮಿಕ್ ಪ್ರೋಗ್ರಾಂ ಬಗ್ಗೆ, ಅವರ ಆರ್ಥಿಕ ಅಭಿವೃದ್ಧಿಗೆ ಕೊಡತಕ್ಕಂಥ ಹಣ ಸರಿಯಾಗಿ ವೆಚ್ಚವಾಗುತ್ತಿಲ್ಲ, ಅದು ದುರುಪಯೋಗವಾಗುತ್ತಿದೆ ಅಂತ ಹೇಳುತ್ತಿದ್ದಾರೆ. ಇದರಲ್ಲಿ ಒಂದು ಎತ್ತು ಒಂದು ಆಕಳಿಗೆ ಸಹಾಯಮಾಡಿದರೆ ಏನು ಉಪಯೋಗವಾಗುತ್ತದೆ, ಇದಕ್ಕಿಂತ ಹಣವನ್ನು ಹಂಚಲು ಒಂದು ಕಮಿಟಿ ಇದೆ. 300 ಜನ ಅರ್ಜಿ ಹಾಕಿಕೊಂಡರೆ, ಅದರಲ್ಲಿ ಒಬ್ಬರಿಗೆ ಮಾತ್ರ ಹಣ ಸಿಕ್ಕುತ್ತದೆಯೇ ಹೊರತು ಇನ್ನೇನೂ ಆಗುವುದಿಲ್ಲ. ಸರಕಾರ ಮಾತ್ರ ಈ ಜನತೆಯ ಉದ್ಧಾರಮಾಡುವುದಕ್ಕಾಗುವುದಿಲ್ಲ. ಸರಕಾರ ಮತ್ತು ಜನಗಳ ಮುಖಂಡರು ಇಬ್ಬರೂಸೇರಿ ಸಹಾಯಕೊಟ್ಟರೆ ಮಾತ್ರ, ಇವರ ಏಳಿಗೆಯಾಗುತ್ತದೆ ಮತ್ತು ಹಣ ಸದ್ವಿನಿಯೋಗವಾಗುತ್ತದೆ.

ಈ ಬ್ಯಾಂಕುಗಳಿಗೆ ಹಣಕೊಟ್ಟಿರುತ್ತೀರಿ. ಅದನ್ನು ಪೂರ್ಣವಾಗಿ ಡಾ್ರ ಮಾಡುತ್ತಾರೆ. ಮಾರ್ಚ್ ತಿಂಗಳಲ್ಲಿ ಇದರ ಹಂಚುವಿಕೆ ಅವರು ಅದಕ್ಕೆ ರಶೀದಿ ಕೊಡಬಹುದು. ಆದರೆ ಆ ಹಣವು ದುರ್ವಿನಿಯೋಗವಾಗುತ್ತಿದೆಯೆಂದು ದೂರುಬಂದಿದೆ.

ಈ ಅಗ್ರಿಕಲ್‌ಚರಲ್ ಕಾಲೋನಿ ಕಟ್ಟುವ ಸ್ಕೀಮನ್ನು ನಿಲ್ಲಿಸಿಬಿಟ್ಟಿದ್ದಾರೆ. ಅದರಿಂದ ರೈತರಿಗೆ ಬಹಳ ಅನುಕೂಲವಿತ್ತು. ಅದನ್ನು ಪುನಃ ತೆಗೆದು ರೈತರಿಗೆ ವ್ಯವಸಾಯ ಸಲಕರಣೆ, ಭೂಮಿ ಎಲ್ಲ ಅನುಕೂಲ ಒದಗುತ್ತಿತ್ತು. ಅದನ್ನು ನಿಲ್ಲಿಸಿದ್ದೀರಿ. ಹೌಸಿಂಗ್ ಸ್ಕೀಮ್ ಮತ್ತು ಅಗ್ರಿಕಲ್‌ಚರಲ್ ಕಾಲೋನಿಗಳಿಗೆ ಹಣ ಒದಗಿಸುವುದು ಒಳ್ಳೆಯದು. ಇಷ್ಟು ಹೇಳಲು ಅವಕಾಶಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಯನ್ನು ಅರ್ಪಿಸಿ, ನನ್ನಭಾಷಣವನ್ನು ಮುಗಿಸುತ್ತೇನೆ.

10-30 A.M.

ಶ್ರೀ ವೈ. ರಾಮಕೃಷ್ಣ (ಯಲಹಂಕ).— ಮಾನ್ಯ ಸಭಾಧ್ಯಕ್ಷರೇ, ಈ ನಿರ್ಣಯವನ್ನು ತಂದಿರತಕ್ಕ ಶ್ರಿಮಾನ್ ಸರ್ವೇಶ್ ಅವರನ್ನು ನಾನು ಅಭಿನಂದಿಸಬೇಕಾಗಿದೆ; ಏಕೆಂದರೆ ಈ ನಿರ್ಣಯವೇನಿದೆ ಅದನ್ನು ಓದುತ್ತೇನೆ.

'ಸರ್ಕಾರದವರು ಸೇವೆಯಲ್ಲಿ ಹಿಂದುಳಿದ ವರ್ಗಗಳು ಮತ್ತು ಅನುಸೂಚಿತ ಜಾತಿಗಳಿಗೆ ಸಾಕಾದಷ್ಟು ಪ್ರಾತಿನಿಧ್ಯ ಕೊಡುವ ದೃಷ್ಟಿಯಿಂದ, ಸರ್ಕಾರೀ ಸೇವೆಯಲ್ಲಿ ಮೊದಲು ನೇಮಕಮಾಡುವ ಕಾಲದಲ್ಲಿಯೂ, ಪೆರೆಕ್ಷನ್ ಹುದ್ದೆಗಳಿಗೆ ಬಡ್ತಿ ಕೊಡುವ ಕಾಲದಲ್ಲಿಯೂ ಹಿಂದುಳಿದ ವರ್ಗ ಮತ್ತು ಅನುಸೂಚಿತ ಜಾತಿಗಳವರ ವಿಚಾರದಲ್ಲಿ ಸ್ಥಾನಮೀಸಲಿಡತಕ್ಕ ನೀತಿಯನ್ನು ಅನುಸರಿಸಬೇಕು ಎಂಬ ಉಚ್ಚತಮ ನ್ಯಾಯಾ

ಲಯದವರ ನಿರ್ಣಯವನ್ನು ಕಾರ್ಯಗತಗೊಳಿಸಲು ಸರ್ಕಾರದವರು ತಕ್ಷಣ ಕಾರ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಈ ಸಭೆಯವರು ಅಭಿಪ್ರಾಯಪಡುತ್ತಾರೆ.'

ಸ್ವಾಮಿ, ಈ ನಿರ್ಣಯಹಿನ್ನು ಸಭೆಯವರು ಅಭಿಪ್ರಾಯಮಾಡುವುದಕ್ಕೆ ಮೊದಲೇ ಸುಪ್ರೀಂಕೋರ್ಟ್ ತೀರ್ಮಾನವನ್ನು ಸರ್ಕಾರದವರೇ ಮುಂದೆಬಂದು ಅನುಷ್ಠಾನಕ್ಕೆ ತಂದಿದ್ದರೆ ಚೆನ್ನಾಗಿತ್ತು ಎಂದು ನನಗೆ ಭಾಸವಾಗುತ್ತದೆ. ಸುಪ್ರೀಂ ಕೋರ್ಟನವರು ಯಾವುದೋ ಒಂದು ಕೇಸಿನ ವಿಚಾರದಲ್ಲಿ ಈ ಒಂದು ವಿಷಯವನ್ನು ಹೇಳಿದ್ದಾರೆ. ಸುಪ್ರೀಂ ಕೋರ್ಟನವರು ಕೇಸನ್ನು ತೀರ್ಮಾನಮಾಡುತ್ತ ಪ್ಯಾರ 25 ರಲ್ಲಿ ಈ ರೀತಿ ಹೇಳಿದ್ದಾರೆ.

"Therefore, we are disposed to take the view that the power of reservation which is conferred, on the State under Art. 16 (4) can be exercised by the State in a propercase not only by providing for reservation of appointments but also by providing for reservation of selection posts. This construction, in our opinion, would serve to give effect to the intention of the constitution-makers to make adequate safeguard for the advancement of backward classes and to secure for their adequate representation in the services."

ನಮ್ಮ ಸಂಸ್ಥಾನದಲ್ಲಿ adequate representation in the services ಇದೆಯೋ ಇಲ್ಲವೋ ಎನ್ನುವ ವಿಚಾರವನ್ನು ನಾವು ಮೊದಲು ಪರಿಶೀಲನೆ ಮಾಡಬೇಕು. ಆಗ ಈ ಜಡ್ಜ್‌ಮೆಂಟಿನಲ್ಲಿ ಹೇಳಿರುವುದನ್ನು ಅನುಷ್ಠಾನಕ್ಕೆ ಕೊಡಬೇಕೇ, ಬೇಡವೇ ಎನ್ನುವ ಪ್ರಶ್ನೆ ಬರುತ್ತದೆ. 1-1-1961 ರಲ್ಲಿ ಸರ್ಕಾರಿ ಹುದ್ದೆಗಳಲ್ಲಿ ಹರಿಜನಗಳು ಮತ್ತು ಗಿರಿಜನರಿಗೆ ಎಷ್ಟರಮಟ್ಟಿಗೆ ಪ್ರಾತಿನಿಧ್ಯವಿತ್ತು ಎಂದು ಈ ಸ್ಟೇಟ್‌ಮೆಂಟಿನಿಂದ ನಮಗೆ ಗೊತ್ತಾಗುತ್ತದೆ.

ಹುದ್ದೆ	ಒಟ್ಟುಸಂಖ್ಯೆ	ಹರಿಜನ ಮತ್ತು ಗಿರಿಜನರಿಗೆ ಬರಬೇಕಾದ ಸ್ಥಾನಗಳು.	ಹಾಲಿ ಕೆಲಸದಲ್ಲಿ ಇರುವವರು
ಕ್ಲಾಸ್ 1	673	121	13
ಕ್ಲಾಸ್ 2	2369	426	90
ಕ್ಲಾಸ್ 3	68838	11888	4289
ಕ್ಲಾಸ್ 4	22158	3088	2255

ಇದನ್ನು ನಾವು ಶೇಕಡವಾರು ಲೆಕ್ಕಹಾಕಿ ನೋಡುವುದಾದರೆ ಎಷ್ಟುಜನ ಹರಿಜನರಿಗೆ ಸರ್ಕಾರದ ಹುದ್ದೆಗಳಲ್ಲಿ ಪ್ರಾತಿನಿಧ್ಯವಿದೆ ಎಂದು ಗೊತ್ತಾಗುತ್ತದೆ. ಅದು ಈ ರೀತಿ ಬರುತ್ತದೆ.

	ಹರಿಜನರು	ಗಿರಿಜನರು	ಇತರರು
ಕ್ಲಾಸ್ 1	1. 89	0. 24	97. 87
ಕ್ಲಾಸ್ 2	3. 36	0. 24	96. 40
ಕ್ಲಾಸ್ 3	6. 38	0. 43	93. 19
ಕ್ಲಾಸ್ 4	11. 96	1. 10	86. 94

ಇದು ಏನು ತೋರಿಸುತ್ತದೆ ಎಂದರೆ ನಮಗೆ ಸ್ವರಾಜ್ಯ ಬಂದು 16 ವರ್ಷಗಳಾದವು, ಹೊಸರಾಜ್ಯಾಂಗ ಜಾರಿಗೆ ಬಂದದ್ದು 1950 ರಲ್ಲಿ ರಾಜ್ಯಾಂಗ ಜಾರಿಗೆ ಬಂದು 13 ವರ್ಷ ಕಳೆದರೂ ಕೂಡ ಮೊದಲನೆಯ ದರ್ಜೆ ಹುದ್ದೆಗಳಲ್ಲಿ ಸ್ಥಾನ ಶೇಕಡ ಎರಡರಷ್ಟು ಕೂಡ ದೊರೆಯಲಲ್ಲ ವಲ್ಲ ಎಂದು ವ್ಯಥೆಯಾಗುತ್ತದೆ. ಇನ್ನೂ 1. 89 ರಲ್ಲಿರತಕ್ಕ ಈ ಸ್ಟೇಟ್‌ಮೆಂಟ್ ಬಹುಶಃ ಶೇಕಡ 18ಕ್ಕೆ ಬರಬೇಕಾದರೆ ನೂರುವರ್ಷವಾದರೂ ಆಗುತ್ತದೆಯೋ ಏನೋ ಎನ್ನುವ ಶಂಕೆ ನಮಗೆ ಖಂಡಿತವಾಗಿ ಬರುತ್ತದೆ. ಬಹುಶಃ ಒಂದು ವರ್ಷಕ್ಕೆ ಶೇಕಡ ಒಂದರಂತೆ ಹೆಚ್ಚುಮಾಡಿಕೊಂಡ ಬಂದಿದ್ದರೂ ಈ ಹದಿಮೂರು ವರ್ಷಗಳಲ್ಲಿ ಶೇಕಡ 13 ರಷ್ಟಾದರೂ ಆಗುತ್ತಿತ್ತು. ಆದರೆ ಸರ್ಕಾರದವರು ಹರಿಜನರ ಮತ್ತು ಗಿರಿಜನರ ಕಡೆ ಉದಾರವಾಗಿ ಗಮನಕೊಡುತ್ತಿಲ್ಲವೆಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

(ಶ್ರೀ ವೈ. ರಾಮಕೃಷ್ಣ)

[Chairman (Smt. BASAVARAJESHWARI) in the Chair].

ಹರಿಜನರಿಗೆ ಮತ್ತು ಗಿರಿಜನರಿಗೆ ಸಾಕಷ್ಟು ಪ್ರಾತಿನಿಧ್ಯವಿದೆಯೇ ಇಲ್ಲವೇ ಎಂದು ತೀರ್ಮಾನ ಮಾಡಲು ಹಿಂದಿನ ಸರ್ಕಾರದಲ್ಲಿ ಶ್ರೀಮಾನ್ ವೀರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದರು. ಅವರು ಕೆಲವಾರು ಅಬ್ಸರ್ವೇಷನ್ಸ್‌ಗಳನ್ನು ಮಾಡಿದ್ದಾರೆ. ಇವತ್ತಿನ ದಿವಸ ಅದರ ರಿಪೋರ್ಟ್ ನಥಿಯ ಮುಂದೆ ಇದೆ. ಅದರಲ್ಲಿ ಅಂಕಿಅಂಶಗಳೆಲ್ಲ ಚೆನ್ನಾಗಿ ದೊರೆಯುತ್ತವೆ. ಆ ಅಂಕಿಅಂಶಗಳ ಪ್ರಕಾರ 18 ಮೇಜರ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಇವತ್ತಿನ ದಿವಸ ಮೊದಲನೆಯ ಎರಡು ದರ್ಜೆಗಳಲ್ಲಿ ಎಷ್ಟೆಷ್ಟು ಹರಿಜನರಿದ್ದಾರೆಂದು ಹೇಳಿದ್ದಾರೆ. ಈ 18 ಇಲಾಖೆಗಳ ಪೈಕಿ 9 ಇಲಾಖೆಗಳಲ್ಲಿ ಹರಿಜನರಿಗೆ ಮೊದಲನೆಯ ದರ್ಜೆಯಲ್ಲಿ ಪ್ರಾತಿನಿಧ್ಯವಿಲ್ಲ ಮತ್ತು ಎರಡನೇ ದರ್ಜೆಯಲ್ಲಿ 6 ಇಲಾಖೆಗಳಲ್ಲಿ ಪ್ರಾತಿನಿಧ್ಯವಿಲ್ಲ. ಒಂದುವೇಳೆ ಸುಪ್ರೀಂ ಕೋರ್ಟಿನವರು ಏನೆಂದು ತೀರ್ಮಾನವನ್ನು ಕೊಟ್ಟಿದ್ದಾರೆಯೋ ಆ ತೀರ್ಮಾನವನ್ನು ನಾವು ಕಟ್ಟುನಿಟ್ಟಾಗಿ ಅನುಸರಿಸದೆ ಹೋದರೆ ಶೇಕಡ 18 ರಷ್ಟು ಶತಮಾನಗಳಿಗೆ ಬರುತ್ತದೆಯೋ ಎನ್ನುವ ಶಂಕೆ ನಮ್ಮಲ್ಲಿ ಮೂಡಿದೆ. ಅದಕ್ಕೋಸ್ಕರವಾಗಿ ಸಾಕಷ್ಟು ಪ್ರಾತಿನಿಧ್ಯ ಇವರಿಗೆ ಸಿಗುವಂತೆ ಮಾಡಬೇಕಾದರೆ ಮೊದಲು ಕೆಲಸಕ್ಕೆ ನೇಮಕಮಾಡಿಕೊಳ್ಳುವಾಗ ಶೇಕಡ 18ರಷ್ಟು ಸ್ಥಾನಗಳನ್ನು ಮೀಸಲಾಗಿಡಬೇಕೆಂಬ ಆದೇಶವೇನಿದೆಯೋ ಅದೇ ಶೇಕಡವಾರು ಪ್ರಮಾಣವನ್ನು ಮುಂದಿನ ವೇಕೆನ್ಸಿಗಳಲ್ಲಿಯೂ ಅನ್ವಯ ಮಾಡಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಬಹುಶಃ ನನಗನ್ನಿಸುತ್ತದೆ ಅನುಕೂಲ ಮಾಡುವುದಕ್ಕೆ ಇವರಿಗೆ ಇಷ್ಟವಿಲ್ಲದೆ ಇದ್ದರೂ ಅನ್ಯಾಯ ಮಾಡುವುದಕ್ಕೆ ಹೋಗುವಾರದು. ಹರಿಜನರಿಗೆ ಯಾವರೀತಿ ನ್ಯಾಯವಾಗಿ ದೊರೆಯ ಬೇಕಾದ ಪಾಲು ದೊರೆಯಲಿಲ್ಲ ಎನ್ನುವುದಕ್ಕೆ ಕೆಲವು ಉದಾಹರಣೆಗಳನ್ನು ಕೊಡುತ್ತೇನೆ. 1-1-1961 ರಲ್ಲಿ 88ಜನ ಪ್ರೊಬೇಷನರಿ ಅಸಿಸ್ಟೆಂಟ್ ಇಂಜಿನಿಯರುಗಳನ್ನು ತೆಗೆದುಕೊಂಡರು. ಅವರಲ್ಲಿ 17 ಜನ ಅನುಸೂಚಿತ ಜಾತಿಗಳವರನ್ನು ನೇಮಕಮಾಡಿಕೊಂಡರು. ಆಗ ಏನುಮಾಡಿದರೆಂದರೆ ಅವರನ್ನು ಮೂರು ಭಾಗವಾಗಿ ಎಂಗೇಜಿಸಿದರು. ಮೊದಲು 17 ಜನರನ್ನು ಅದರಲ್ಲಿ ಹರಿಜನರೊಬ್ಬರೂ ಇರಲಿಲ್ಲ ಸೆಕ್ಷನ್ ಆಫೀಸರುಗಳಾಗಿ ಇಂಡಿಪೆಂಡೆಂಟ್ ಚಾರ್ಜಿಗೆಕಳಿಸಿದರು. ಎರಡನೆಯದಾಗಿ 6-7-1962ರಲ್ಲಿ 34ಜನರನ್ನು ಪೋಸ್ಟ್‌ಮಾಡಿದರು. ಅದರಲ್ಲಿ ಹರಿಜನರಿಗೆ ಒಬ್ಬರಿಗೆ ಕೊಟ್ಟರು. 31-8-1962ರಲ್ಲಿ 12ಜನರನ್ನು ಇಂಡಿಪೆಂಡೆಂಟ್ ಚಾರ್ಜಿಗೆ ಪೋಸ್ಟ್‌ಮಾಡಿದರು. ಮೂರನೆಯ ತಂಡದಲ್ಲಿ ಹರಿಜನರನ್ನೆಲ್ಲ ಸೇರಿಸಿ ಅವರ ಪೈಕಿ ಮೂರು ಜನರಿಗೆ ಕೊಟ್ಟರು. ಇನ್ನು 13ಜನ ಪ್ರೊಬೇಷನರಿಯಲ್ಲಿಯೇ ಇದ್ದಾರೆ. ರಾಜ್ಯಾಂಗದಲ್ಲಿ ಅವರಿಗೆ ನ್ಯಾಯವಾದ ಪ್ರಾತಿನಿಧ್ಯ ದೊರಕಬೇಕು ಎಂದು ಹೇಳಿದ್ದಾಗ್ಗೂ ಕೂಡ Public Service Commission ಅವರ cycle of appointments ಪ್ರಕಾರ every fourth appointment belongs to Scheduled Castes ಎಂದು ಇದ್ದರೂ ಕೂಡ ಸರ್ಕಾರದವರು ಈ ರೀತಿ ಅನ್ಯಾಯಮಾಡುವುದಾದರೆ ಇನ್ನು ಎಲ್ಲಗೆ ಹೋಗಬೇಕೋ ಗೊತ್ತಿಲ್ಲ. ಇದು ತುಂಬ ವಿಷಾದಕರ. ಸರ್ಕಾರವರು ಇಂಥ ಒಂದು ಅನ್ಯಾಯಕ್ಕೆ ಎಡೆಕೊಡಬಾರದೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಅದೇ ರೀತಿ ತಹಶೀಲ್‌ದಾರರನ್ನು ತೆಗೆದುಕೊಂಡರು. ಅವರಿಗೆ ದೊರೆಯ ಬೇಕಾದ ಕೋಟಾ ಕೊಟ್ಟರು. ಆದರೆ 16 ಜನ ಹೈಕೋರ್ಟಿಗೆ ಹೋಗಿ ರಿಟ್ ಅರ್ಜಿ ಹಾಕಿದರು. ಹೈಕೋರ್ಟ್ ನಿರ್ಣಯದ ಪ್ರಕಾರ 16 ಜನರನ್ನು ತೆಗೆದುಕೊಂಡರು. ಅವರಲ್ಲಿ ಯಾರೂ ಹರಿಜನರು ಇಲ್ಲ. ಹೀಗಾದರೆ ರಿಜರ್ವೇಷನ್ ಕೊಡುವುದು ಹೇಗೆ? ಹರಿಜನರಿಗೆ ಹೇಗೆ ಸೇಫ್‌ಗಾರ್ಡ್ ಇದೆ? 17 ಸೋಷಿಯಲ್ ವೆರ್ ಫೇರ್ ಹುದ್ದೆಗಳು ಇವೆ. ನಮಗೆ ಸ್ವರಾಜ್ಯ ಬರುವ ಪೂರ್ವದಲ್ಲಿಯೇ ಹಳೇ ಮೈಸೂರಿನಲ್ಲಿ ದಿವಾನ್ ಮಾಧವರಾಯರ ಕಾಲದಲ್ಲಿ ಈ ಹುದ್ದೆಗಳನ್ನು ನಿರ್ಮಾಣ ಮಾಡಲಾಗಿದೆ. ಬಳ್ಳಾರಿ ಜಿಲ್ಲೆ ಸೇರ್ಪಡೆಯಾದ ಮೇರೆ ಎರಡು ಹುದ್ದೆ ನೇಮಕ ಮಾಡಿದರು. ರಾಜ್ಯ ಪುನರ್ವಿಂಗಡಣೆಯಾದ ನಂತರ ಆರು ಜನರನ್ನು ನೇಮಕ ಮಾಡಿದರು. ಇವು ಹಿಂದಿನಿಂದ ನಡಕೊಂಡು ಬಂದಿರತಕ್ಕಂಥ ಹುದ್ದೆಗಳು. ಇವು ಹೊಸದಾಗಿ ಮಾಡಿರತಕ್ಕಂಥಾದ್ದು ಅಲ್ಲ. ಇವರಿಗೆ ಕೆಲಸ ಇಲ್ಲ ಎಂದು ಇಂಥ ಹುದ್ದೆಗಳಿಗೆ ನೇಮಕವಾದ 17 ಜನ ಹರಿಜನರನ್ನು ತೆಗೆಯಬೇಕೆಂದು ಸರಕಾರ ಮಾಡಿದ್ದರಲ್ಲಿ ಯಾವ ನ್ಯಾಯವಿಲ್ಲ. ಈ ಕ್ರಮ ಏತಕ್ಕೆ ತೆಗೆದುಕೊಂಡರು? ಈ 17 ಜನ ಹರಿಜನರು ಪದವೀಧರರೂ ಪೂರ್ಣ ಅರ್ಹತೆಯುಳ್ಳವರೂ ಆಗಿದ್ದಾರೆ. ಇದಲ್ಲದೆ ಮೊದಲಿನಿಂದ ಸರಕಾರಿ ನವಕರಿಯಲ್ಲಿದ್ದವರಾಗಿದ್ದಾರೆ. ಸ್ಪೆಷಲ್ ಆಫೀಸರಾಗಿ ದಿನ್ನಿಷ್ಟಿಗೆ ಒಬ್ಬರು ಇದ್ದರು. ಪೋಸ್ಟ್ ಈಕ್ವೇಟ್ ಮಾಡುವಾಗ ಸೆಕೆಂಡ್ ಗ್ರೇಡ್ ಕ್ಲಾರ್ಕ್ ಎಂದು ಈಕ್ವೇಟ್ ಮಾಡಿದರು. ಈ ಸಂದರ್ಭದಲ್ಲಿ ಪಬ್ಲಿಕ್ ಸರ್ವಿ

ಕಮಿಷನ್ ನಲಹೆ ಮಾಡುವಾಗ್ಗೆ ಸಬ್ಜೆಕ್ಟು ಏಜ್ ಅಂಡ್ ಕ್ವಾಲಿಫಿಕೇಷನ್ಸ್ ಎಂದು ಎರಡು ಕ್ಲಾಜ್ ಹಾಕಿದ್ದಾರೆ. ಎಲ್ಲರೂ ಕ್ವಾಲಿಫೈಡ್ ಇದ್ದಾರೆ. ಏಜ್ ಎಕ್ಸೆಪ್ಟ್ ಮಾಡತಕ್ಕಂಥ ಅಧಿಕಾರ ಸರಕಾರಕ್ಕೆ ಇದೆ. ಇದನ್ನು ಉಪಯೋಗಿಸಿಕೊಂಡು ರೆಗ್ಯುಲರೈಜ್ ಮಾಡಿದರೆ ಯಾವ ತಂಜೆ ಒರುವುದಿಲ್ಲ. ಈ 17 ಜನರಲ್ಲಿ ಇಬ್ಬರಿಗೆ ಸ್ಪೆಷಲ್ ಟ್ರೈನಿಂಗ್ ಕೊಡುವುದಕ್ಕಾಗಿ ಮೈಸೂರು ಸರಕಾರ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆ. ಅವರಲ್ಲಿ ಎಂಟು ಜನರು ಕೇಂದ್ರ ಸರಕಾರದಲ್ಲಿ ಸ್ಪೆಷಲ್ ಟ್ರೈನಿಂಗ್ ಪಡೆದಿದ್ದಾರೆ. 16 ವರ್ಷ ಸರ್ವಿಸ್ ಆಗಿದೆ. ಅವರಲ್ಲಿ ಒಬ್ಬರು ಬರುವ ವರ್ಷ ರಿಟೈರ್ ಆಗತಕ್ಕಂಥವರು ಇದ್ದಾರೆ. ಇಂಥವರನ್ನು ತೆಗೆಯಬೇಡಿ ಎನ್ನುವುದು ಸರಿಯಲ್ಲ. ರೆಗ್ಯುಲರೈಜ್ ಮಾಡಲು ಬಹುಶಃ ಸರಕಾರಕ್ಕೆ ಮನಸ್ಸು ಇಲ್ಲ ಎಂದು ಕಾಣುತ್ತದೆ. ಇದುವರೆಗೆ ಹರಿಜನರಿಗೆ 1.89 ಪರ್ಸೆಂಟ್ ಪ್ರಾತಿನಿಧ್ಯ ದೊರೆತಿದೆ ಎಂಬುದು ಬಹಳ ವಿಷಾದವಾಗುತ್ತದೆ. ರಿಜರ್ವೇಷನ್ ಬಗ್ಗೆ ಆಂಧ್ರ ರಾಜ್ಯದಲ್ಲಿ ಅನುಸರಿಸಿದ ನೀತಿ ನಮ್ಮ ರಾಜ್ಯದಲ್ಲಿ ಸರಕಾರ ಏತಕ್ಕೆ ಅನುಸರಿಸುತ್ತಿಲ್ಲ? ದಯವಿಟ್ಟು ಇಂಥ ಮನಸ್ಸು ಮಾಡಬಾರದು. ಸರಕಾರಕ್ಕಿರುವ ಅಧಿಕಾರ ಉಪಯೋಗಿಸಿಕೊಂಡು ರೆಗ್ಯುಲರೈಜ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಸರಕಾರ ಮಾಡುತ್ತಾರೆ ಎಂದು ಭಾವಿಸಿದ್ದೇನೆ. ಇವರ ಪ್ರಾತಿನಿಧ್ಯ ಹೆಚ್ಚಿಗೆ ಮಾಡಲು ಸರಕಾರ ಕೆಲವು ವರ್ಷದವರೆಗೆ ಒಂದು ಕಾರ್ಯಕ್ರಮ ಹಾಕಿಕೊಳ್ಳುವುದು ಒಳ್ಳೆಯದು. ಇದಲ್ಲದೆ ಸರಕಾರಿ ನಪಕರಿಯಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಮನಸ್ಸು ದೊಡ್ಡದುಮಾಡಬೇಕು ಎಂದು ಅನುಷ್ಠಾನಕ್ಕೆ ತರಬೇಕೆಂದೂ ಮನನೊಂದು ಸರಕಾರದ ಗಮನಕ್ಕೆ ತರುತ್ತೇನೆ. ಈ 17 ಜನ ಹರಿಜನ ಅಭೀನರುಗಳು ಸಂಬಂಧಪಟ್ಟ ಸೆಕ್ರೆಟರಿಯವರ ಕಡೆ ಹೋಗಿ ದಯವಿಟ್ಟು ಸ್ವೀಕರಿಸಬೇಕು ಎಂದು ಕೇಳಿದಾಗ್ಗೆ ಪ್ಲಾನಿಂಗ್ ಅಂಡ್ ಡೆವಲಪ್‌ಮೆಂಟ್ ಸೆಕ್ರೆಟರಿಯವರು ಉತ್ತರ ಕೊಟ್ಟರು, ಇದನ್ನು ಬಿಟ್ಟು ಮುಡಕೆ ತಟ್ಟುವ ಕೆಲಸಕ್ಕೆ ಹೋಗಬಹುದು ಎಂದು ಉತ್ತರ ಕೊಟ್ಟರು. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಸೆಕ್ರೆಟರಿ ನೊಂದ 17 ಜನ ಅಧಿಕಾರಿಗಳಿಗೆ ಈ ರೀತಿ ಮಾತನ್ನಾಡಿರುವ ಉತ್ತರ ಕೊಟ್ಟಾಗ್ಗೆ ಅವರಿಗೆ ಎಷ್ಟು ಸಂತೋಷವಾಗಿರಬಹುದು ಎಂಬುದು ಗೋಚರವಾಗಬೇಕು. ಅವರ ಅನ್ಯಾಯ ನಿವಾರಣೆ ಭಗವಂತ ಅವರ ಕಡೆ ಇದ್ದಾನೆ. ಇಂಥಾ ಮಾತನಾಡುವುದಕ್ಕೆ ಒಂದು ಮಿತಿ ಇರಬೇಕು. ಅವರು ಕಣ್ಣಲ್ಲಿ ನೀರು ತಂದುಕೊಂಡು ಭಾರವಾದ ಮನಸ್ಸಿನಿಂದ ದುಃಖ ತುಂಬಿ ಬಂದು ತಿರುಗಿ ಬಂದರು ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದಾರೆ ಎಂಬುವುದು ಗೊತ್ತಿಲ್ಲ. ಕೆಲವುಕಡೆ ಯೂನಿಟ್ ಆಫೀಸಿಗೆ ರಿಜರ್ವೇಷನ್ ಆರ್ಡರ್ ಕಳಿಸಿದ್ದರೂ ಕೂಡ ಜಾರಿಗೆ ತರತಕ್ಕಂಥ ಮನಸ್ಸು ಅಧಿಕಾರಿಗಳಿಗೆ ಇಲ್ಲ. ಆದುದರಿಂದ ಈ ಬಗ್ಗೆ ಚೀಫ್ ಸೆಕ್ರೆಟರಿಯವರಿಗೆ ಅಧಿಕಾರ ಕೊಡಬೇಕು. ಜಿ.ಎ.ಡಿ.ಯವರು ರಿಜರ್ವೇಷನ್ ಬಗ್ಗೆ ತೀರ್ಮಾನ ಮಾಡಬೇಕು. ಅಧಿಕಾರಿಗಳು ಸರಿಯಾಗಿ ಮಾಡದೇ ಇದ್ದರೆ ಏನು ಡೈರೆಕ್ಟಿವ್ ಕೂಡಬೇಕು, ಏನು ಸೂಚನೆ ಮಾಡಬೇಕು ಎಂಬುದಕ್ಕೆ ಚೀಫ್ ಸೆಕ್ರೆಟರಿಯವರಿಗೆ ಅಧಿಕಾರ ಕೊಡಬೇಕೆಂದು ನನ್ನ ಅಭಿಪ್ರಾಯ.

ಈಗ ಪ್ರೊಮೋಷನರ್ ವೇಕೆನ್ಸಿ ಶೇಕಡ 18 ರಷ್ಟು ಕೊಡುವುದಕ್ಕೆ ಮನಸ್ಸು ಬಾರದೆ ಇದ್ದರೆ ನಾನು ಅದಕ್ಕೆ ಇನ್ನೊಂದು ಸಲಹೆ ಕೊಡುತ್ತೇನೆ. ನೆಹರು ಅವರು ಅದನ್ನು ಒಪ್ಪಿದ್ದಾರೆ. ಇನ್ನು ಸುಮಾರು ಹತ್ತು ವರ್ಷ ಕಾಲ ಹಿಂದುಳಿದವರ ನೇಮಕ ಮಾಡುವುದನ್ನು ಈ ರೀತಿ ಜಾಸ್ತಿ ಮಾಡಬೇಕು. ಒಂದನೇ ಕ್ಲಾಸಿಗೆ ಶೇಕಡ 25, ಎರಡನೇದಕ್ಕೆ ಶೇಕಡ 30, ಮೂರನೇದಕ್ಕೆ ಶೇಕಡ 40, ನಾಲ್ಕನೇ ವರ್ಗಕ್ಕೆ ಶೇಕಡ 50ರಷ್ಟು ಏರಿಸಬೇಕು. ಹೀಗೆ ಮಾಡಿದರೆ ನಾವು ನಿರೀಕ್ಷಣೆ ಮಾಡುವುದಕ್ಕೆ ಮೊದಲೇ ಪ್ರಾತಿನಿಧ್ಯ ದೊರಯುತ್ತದೆ ಎಂದು ನಮ್ಮ ಆಶೆ. ಯಾರಿಗೂ ಬಾಧಕವಾಗುವುದಿಲ್ಲ. ಇದಕ್ಕೆ ರೂಲ್ಸ್ ತೊಂದರೆ ಇಲ್ಲ. ಆದ್ದರಿಂದ ಈ ನಲಹೆ ಪರಿಶೀಲನೆ ಮಾಡಬೇಕೆಂದು ಬಹಳ ಒತ್ತಾಯ ಪೂರ್ವಕವಾಗಿ ಮನವಿ ಮಾಡಿಕೊಳ್ಳುತ್ತೇನೆ.

ಹಾಗೇನೆ, ಮುನಿಸಿಪಾಲಿಟಿ ಅಟಾನಮಸ್ ಬಾಡಿಗಳಲ್ಲಿ ಇಂಡಸ್ಟ್ರಿಯರ್ ಕನ್ಸರ್ನ್ಸ್ ಸರಕಾರದ ಅಧೀನದಲ್ಲಿರತಕ್ಕಂಥವುಗಳಲ್ಲಿ ರಿಜರ್ವೇಷನ್ ಇಲ್ಲ. ಸ್ಥಳೀಯ ಸಂಸ್ಥೆಗಳಿಗೆ ಕೂಡ ರಿಜರ್ವೇಷನ್ ಆರ್ಡರ್ ಅನ್ವಯಿಸಿಲ್ಲ. ಕೆಲವು ಅಟಾನಮಸ್ ಬೋರ್ಡು, ಕಮಿಟಿಗಳಲ್ಲಿ ರಿಜರ್ವೇಷನ್ ಇಲ್ಲ. ಇಂಥದರಲ್ಲಿ ಕೂಡ ರಿಜರ್ವೇಷನ್ ಅನುಸರಿಸಬೇಕೆಂದು ಸರಕಾರ ಒಂದು ಆದೇಶ ಕಳಿಸಬೇಕು.

ಆಗ ಪರ್ಸೆಂಟೇಜ್ ಜಾಸ್ತಿಯಾಗುತ್ತದೆ ಎಂದು ಹೇಳುತ್ತೇನೆ. ವಾಸ್ತವಿಕವಾಗಿ 250 ರೂಪಾಯಿ ಸಂಬಳ ಬರತಕ್ಕ ಕೆಲಸದಲ್ಲಿ ಒಬ್ಬ ಹರಿಜನರೂ ಯಾವ ಸ್ಥಳೀಯ ಸಂಸ್ಥೆಗಳಲ್ಲೂ ಇಲ್ಲ ಎಂದು ವರಧಿಯಲ್ಲಿ ಹೇಳಿದ್ದೀರಿ. ಇದು ಏನು ತೋರಿಸುತ್ತದೆ ಎಂದರೆ ಮನಸ್ಸಿಲ್ಲ ಎಂದು ತೋರಿಸುತ್ತದೆ. ಇದು ರಾಜ್ಯಾಂಗದಲ್ಲಿ ಅಡಕವಾಗಿದೆ, ಅಡಕವಾಗಿಡೆಯಲ್ಲಾ ಎಂದಾದರೂ ಮಾಡಬೇಕು. ಆ ರೀತಿ ಮಾಡದಿದ್ದರೆ ರಾಜ್ಯಾಂಗಕ್ಕೆ ಗೌರವ ತೋರಿಸಿದಂತಾಗುವುದಿಲ್ಲ. ಅದನ್ನು ಉಲ್ಲಂಘನೆ ಮಾಡಿದಂತಾಗುತ್ತದೆ. ದಕ್ಷತೆಯನ್ನು ಬಿಡಬೇಕೆಂದು ನಾನು ಹೇಳುವುದಿಲ್ಲ. ದೇಶದ

ಅಡಳಿತ ಬಹಳ ಮುಖ್ಯವಾದುದು. ದೇಶದಲ್ಲಿ ದಕ್ಷತೆಯ ಅಡಳಿತವಿರಬೇಕು, ದಕ್ಷ ಅಧಿಕಾರಿಗಳು ಇರಬೇಕು, ರಿಸರ್ವೇಷನ್ ಕೊಟ್ಟು ದಕ್ಷತೆ ಕಡಿಮೆ ಮಾಡಿ ಎಂದು ಹೇಳುವುದಿಲ್ಲ. ಆದರೆ ದಕ್ಷತೆಯನ್ನು ಟೆಸ್ಟ್ ಮಾಡುವುದಕ್ಕೆ ಎಕ್ಸ್‌ಪರಿಮೆಂಟ್ ಮಾಡಿದ್ದೀರಾ ಎಂದರೆ ಅದೂ ಕಾಣುವುದಿಲ್ಲ. ಇದು ನೋಡುವುದಕ್ಕೆ ಬಹಳ ಸಣ್ಣ ಒಂದು ನಿರ್ಣಯದ ತರಹ ಇದ್ದರೂ ಕೂಡ ಬಹುಶಃ ಇದನ್ನೇ ಒಂದು ಭಾಗದ ಜನರ ಆಶೆ ಮತ್ತು ಆಶೋತ್ತರಗಳನ್ನು ಈಡೇರಿಸತಕ್ಕ ನಿರ್ಣಯ ಇದು ಎಂದು ಹೇಳಿ ಈ ನಿರ್ಣಯಕ್ಕೆ ಪೂರ್ಣ ಬೆಂಬಲವನ್ನು ಸೂಚಿಸುತ್ತಾ ನಾನು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ಅಧ್ಯಕ್ಷಣಿಯರೇ, ಹರಿಜನ ಮತ್ತು ಗಿರಿಜನರೇ ಮುಂತಾದ ಅನುಸೂಚಿತ ಪಂಗಡಗಳಿಗೆ ಮತ್ತು ಗಿರಿಜನರೇ ಮುಂತಾದ ಅನುಸೂಚಿತ ಪಂಗಡಗಳಿಗೆ ಮತ್ತು ಹಿಂದುಳಿದ ಪಂಗಡಗಳಿಗೆ ಸರ್ಕಾರಿ ಸೇವೆಯಲ್ಲಿ ಸ್ಥಾನಗಳನ್ನು ಕಾದಿರಿಸಬೇಕೆಂಬ ನೀತಿಗೆ ನನ್ನ ಪೂರ್ಣ ಬೆಂಬಲವುಂಟು. ಬರೀ ಸರ್ಕಾರಿ ಸೇವೆಯಲ್ಲೇ ಏಕೆ, ಅವಕಾಶವಿರುವಂಥ ಎಲ್ಲಾ ಕ್ಷೇತ್ರಗಳಲ್ಲಿಯೂ ಈ ಪಂಗಡಗಳಿಗೆ ಪ್ರಾಶಸ್ತ್ಯ ಕೊಡಬೇಕೆಂಬುದನ್ನೂ ಸಹಾ ನಾನು ಸಮರ್ಥಿಸುತ್ತೇನೆ. ನನಗೆ ತಿಳಿದ ಮಟ್ಟಿಗೆ ಈ ರೀತಿ ಹಾಲಿ ಸರ್ಕಾರ ಮತ್ತು ಕೆಲವು ಕ್ಷೇತ್ರಗಳಲ್ಲಿ ಕಲ್ಪಿಸಿರುವ ಪ್ರಾಶಸ್ತ್ಯ ಕೊಡುವ ಪದ್ಧತಿ ಆಚರಣೆಯಲ್ಲಿದೆ ಎಂದು ತಿಳಿದಿದ್ದೇನೆ. ಹೀಗಿರುವಾಗ ಈ ನಿರ್ಣಯವನ್ನು ತಂದೇ ಈ ಬಗ್ಗೆ ಎಚ್ಚರಿಸಬೇಕಾದ ಪರಿಸ್ಥಿತಿ ಬಂದಿತೆಯೇ, ಅಂತಹ ಅನ್ಯಾಯಗಳೇನಾದರೂ ಸಂಭವಿಸಿವೆಯೇ ? ಎಂದು ಈ ನಿರ್ಣಯ ತಂದಿರುವ ನನ್ನ ಮಾನ್ಯ ಸೋದರರನ್ನು ಪ್ರಶ್ನಿಸುತ್ತೇನೆ. ನನಗೆ ತಿಳಿದಮಟ್ಟಿಗೆ ಸರ್ಕಾರ ಈ ಪಂಗಡಗಳ ಬಗ್ಗೆ ತುಂಬಾ ಉದಾರ ನೀತಿಯನ್ನು ಅನುಸರಿಸಿಕೊಂಡು ಬಂದಿದೆ ಎಂದು ಹೇಳಬಹುದು. ವಿಶೇಷವಾದ ಸ್ಥಳಗಳಿಗೆ ಅರ್ಹರಾದ ಅಭ್ಯರ್ಥಿಗಳು ದೊರೆಯದಿದ್ದಾಗ ಆ ಸ್ಥಾನಗಳನ್ನು ಯಥಾವಿಲ್ಲದೆ ಬೇರೆ ಯೋಗ್ಯರಾದ ಅಭ್ಯರ್ಥಿಗಳಿಗೆ ಕೊಟ್ಟಿರಬಹುದೇ ಹೊರತು ಈ ಬಡಕಟ್ಟುಗಳನ್ನು ನಿರ್ಲಕ್ಷಿಸಿದ್ದು ಕಡಿಮೆ ಬಂದಿಲ್ಲ. ಕಾದಿರಿಸಿದ ಸ್ಥಳಗಳಿಗೆ ಯೋಗ್ಯರಾದವರು ದೊರೆಯದಿದ್ದರೆ ಅವುಗಳನ್ನು ಬೇರೆಯವರಿಗೆ ಕೊಡಬಹುದೆಂಬ ಆದೇಶವೂ ಸಹ ಉಚ್ಚತಮ ನ್ಯಾಯಾಲಯದ ನಿರ್ಣಯದಲ್ಲಿದೆ. ಇದರಂತೆ ಸರ್ಕಾರ ಅನುಸರಿಸುತ್ತಿರುವುದು ನನ್ನ ಅನುಭವಕ್ಕೆ ಬಂದಿದೆ. ಹೀಗಿರುವಾಗ, ಎಲ್ಲಿ ಅನ್ಯಾಯವಾಗಿದೆ ? ಯಾವ ರೀತಿ ಆಗಿದೆ ಎಂಬುದನ್ನು ಉದಾಹರಣೆಗಳ ಸಮೇತ, ಅಂಕೆ ಸಂಖ್ಯೆಗಳ ಸಮೇತ ಸಭೆಯ ಗಮನಕ್ಕೆ ಈ ನಿರ್ಣಯದ ಸೂಚಕರು ತರಬೇಕಾಗಿತ್ತು. ಈ ಕೆಲಸವನ್ನು ಮಾನ್ಯ ಸೂಚಕರು ಮಾಡಿಲ್ಲವೆಂದೇ ನಾನು ಭಾವಿಸಿದ್ದೇವೆ. ಹರಿಜನ, ಗಿರಿಜನರ ಮುಂದಾಳುಗಳಾದವರ ಜವಾಬ್ದಾರಿ ತುಂಬಾ ಇದೆ. ಎಲ್ಲಾ ಅನುಸೂಚಿತ ಬಡಕಟ್ಟುಗಳಿಗೂ ಅನ್ಯಾಯವಾಗದ ರೀತಿಯಲ್ಲಿ ಅವರು ಕೆಲಸ ಮಾಡಬೇಕಾಗುತ್ತದೆ. ಎಷ್ಟೋಬಾರಿ ಹರಿಜನ, ಗಿರಿಜನರಿಗೆ, ನಾನಾ ರೂಪಗಳಲ್ಲಿ, ನಾನಾ ರೀತಿಯಲ್ಲಿ, ಸರ್ಕಾರ ಸಹಾಯ ಮಾಡಿದ ಹಣವನ್ನು ಮಧ್ಯದವರೇ ಸ್ವಾಹಾಮಾಡಿದ ಉದಾಹರಣೆಗಳು, ಬೇಕಾದಷ್ಟು ಸಾಕಷ್ಟು ದೊರೆತಿವೆ. ಜನಾಂಗದ ಹೆಸರಿನಲ್ಲಿ ಯಾರೋ ಕೆಲವರು ಸ್ವಾರ್ಥ ಸಾಧಿಸಿಕೊಳ್ಳುವುದನ್ನು, ಯಾರೋ ಕೆಲವರು ಶ್ರೀಮಂತರಾಗುವುದನ್ನು ನಿಲ್ಲಿಸುವ, ತಡೆಯುವ ಕಾರ್ಯಕ್ಕೆ ಮೊದಲು ಮಹತ್ವ ಕೊಟ್ಟಿದರೆ ಆ ಕಾರ್ಯವನ್ನು ಎಲ್ಲರೂ ಮೆಚ್ಚುತ್ತಿದ್ದರು. ಹುಚ್ಚರ ಮದುವೆಯಲ್ಲಿ ಉಂಡವನೇ ಜಾಣ ಎಂಬಂತೆ ಏನೂ ತಿಳಿಯದ ಜನರ ಹೆಸರಿನಲ್ಲಿ ತಿಳಿದ ಕೆಲವರು ಪಡೆಯುತ್ತಿರುವ ಸೌಕರ್ಯಗಳು ನಿಂತಲ್ಲಿ, ಅನುಸೂಚಿತ ಜಾತಿಗಳ ಉನ್ನತಿಗೆ ತುಂಬಾ ಸಹಾಯವಾಗುತ್ತದೆ. ಹರಿಜನ--ಗಿರಿಜನ ಮುಖಂಡರು ಒಬ್ಬೊಬ್ಬರು ವರ್ಷಕ್ಕೆ ಹತ್ತು ಬಡ ಕುಟುಂಬಗಳನ್ನು ಎಲ್ಲಾ ದೃಷ್ಟಿಗಳಿಂದಲೂ ಮುಂದೆ ತರುವ ಒಂದು ರಚನಾತ್ಮಕ ಕಾರ್ಯಕ್ರಮ ಹಾಕಿಕೊಳ್ಳಲಿ. 'ದೇವರ ಹೆಸರಿನಲ್ಲಿ ಪೂಜಾರಿ ತನ್ನ ದೊಡ್ಡಸ್ತಿಕೆ ಬೆಳೆಸುವಂತೆ' ಹರಿಜನ--ಗಿರಿಜನರ ಹೆಸರಿನಲ್ಲಿ ಸ್ವಾರ್ಥಿಗಳು ಮಾಡುತ್ತಿರುವ ಅನ್ಯಾಯ, ಸುಲಿಗೆ ಮೊದಲು ನಿಲ್ಲಬೇಕು. ಎಡಗೈ, ಬಲಗೈ, ಸೂರಮ ಕೊರಚ, ಒಡ್ಡ, ಲಂಬಾಣಿ, ಎಂಬ ಭೇದಭಾವಗಳು ಹೋಗಬೇಕು. ಎಡಗೈ ಮುಂದಾಳುಗಳು ಎಡಗೈನವರಿಗೇ ಸಹಾಯ ಮಾಡುವುದು, ಬಲಗೈ ಮುಂದಾಳುಗಳು ಬಲಗೈನವರಿಗೇ ಸಹಾಯ ಮಾಡುವುದು ನಿಲ್ಲಬೇಕು. 'ಬಲೇಚ ಹೃಥ್ವಿ' ಎಂಬಂತೆ ಹಿಂದುಳಿದವರು ಹಿಂದೆಯೇ ಉಳಿಯುತ್ತಾರೆ. ಕಾರಣ ಮುಂದಾಳುಗಳು ನಿಸ್ವಾರ್ಥತೆಯಿಂದ ಸೇವೆ ಸಲ್ಲಿಸಿದ್ದಲ್ಲಿ ಎಲ್ಲಾ ಕ್ಷೇತ್ರಗಳಲ್ಲಿ ಎಲ್ಲಾ ಅನುಕೂಲಗಳೂ ಎಲ್ಲಾ ಅನುಸೂಚಿತಜಾತಿಗಳಿಗೂ ದೊರೆಯುವಷ್ಟರಲ್ಲಿ ಸಂದೇಹವಿರದು. 'ಕುಲಕ್ಕೆ ಮೃತ್ಯು ಕೆಡಲು ಕಾವು' ಎಂಬಂತೆ ಅನುಸೂಚಿತ ಮುಖಂಡರೆಂದುಕೊಳ್ಳುವ ಕೆಲವರಿಂದ ಅನುಸೂಚಿತ ಪಂಗಡಗಳಿಗೆ ಆಗುವ ಅನ್ಯಾಯ ಮೊದಲು ನಿಂತಲ್ಲಿ ಎಲ್ಲವೂ ತನಗೆ ತಾನೇ ಸರಿ ಹೋಗುತ್ತದೆ.

ಈಗ ಕಾಲ ಪರಿವರ್ತನೆಯಾಗಿದೆ, "ಅದೋ ನೋಡಿ ಕಾಲಪುರುಷ ಕುಣಿಯುತಾನೆ, ಕ್ರಾಂತಿ ಕಹಳೆ ನಾದವನ್ನು ನುಡಿಸುತಾನೆ. ವಿಶ್ವಸಮತೆ ಕೊಳಲನೂದಿ ನಲಿಯುತಾನೆ" ಉಚ್ಚ-ನೀಚ, ಮೇಲು-ಕೀಳು ತುಳಿಯುತ್ತಾನೆ. ಹೀಗಿರುವಾಗ ಅನುಸೂಚಿತ ಜಾತಿಗಳ ಉನ್ನತಿಯನ್ನು ತಡೆಯಲು ಜಗತ್ತಿನ ಯಾವ ಶಕ್ತಿಯಿಂದಲೂ ಸಾಧ್ಯವಿಲ್ಲ.

11 A.M.

ಕಳೆದ ಮೂವತ್ತು ವರ್ಷಗಳಲ್ಲಿ ಮಹಾತ್ಮಾಜಿಯವರ ಕೃಪೆಯಿಂದ ಅದ್ಭುತ ಪವಾಡವೇ ನಡೆದುಹೋಗಿದೆ. ಈಗ ನಡೆಯುತ್ತಲೂ ಇದೆ. ಇದಕ್ಕೆ ಆತುರಪಡಬೇಕಾಗಿಯೂ ಇಲ್ಲ. ಅಗ್ರಹ ಕೊಡಬೇಕಾಗಿಯೂ ಇಲ್ಲ, ಯಾರನ್ನೂ ಹೇಳದೆ ಕೇಳದೆ, ಕಾರ್ಯ ನಡೆಯುತ್ತದೆ. ಹರಿಜನ ಗಿರಿಜನ ಮುಖಂಡರು ಕೆಲವರ ಅತಿಆಸೆ ನಿಲ್ಲಬೇಕು.

ಶ್ರೀ ಗೋಪಾಲ ಸಾವೆನ್ (ಮೂಡಬಿದರೆ).—ನನ್ನದೊಂದು ಪಾಯಿಂಟ್ ಆಫ್ ಆರ್ಡರಿದೆ. ಮಾನ್ಯ ಸದಸ್ಯರು ಮಾತಾಡುವಾಗ ಎಡಗೈ, ಬಲಗೈ ಎಂದು ಅಭಿಪ್ರಾಯ ಹೇಳುತ್ತಿದ್ದಾರೆ. ಇದರಲ್ಲಿ ಯಾವುದಾದರೂ ವಿರ್ದಿಷ್ಟವಾದ ಉದಾಹರಣೆಯನ್ನು ಕೊಡುವುದು ಒಳ್ಳೆಯದು. ಎಡಗೈ ನಿವರ ಮೇಲೆ ಅಥವಾ ಬಲಗೈಮೇಲೆ ಎಂದು ಹೇಳುವಾಗ ಅವರ ವಿವರಗಳನ್ನೂ ಹೇಳಬೇಕಾಗಿತ್ತು.

ಸಭಾಪತಿಯವರು.—ಇದರಲ್ಲಿ ಯಾವ ಸ್ಪೆಸಿಫಿಕ್ ಪಾಯಂಟೂ ಇಲ್ಲ. ಪಾಯಿಂಟ್ ಆಫ್ ಆರ್ಡರೂ ಏನಿಲ್ಲ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಕೆಲವು ಮುಖಂಡರು ಮಾಡಿದ್ದಾರೆ. ಹೆಸರನ್ನು ಬೇಕಾದರೂ ಕೊಡುತ್ತೇನೆ.

ಸಭಾಪತಿಯವರು.—ಹೆಸರುಗಳನ್ನು ಕೊಡಬೇಡಿರಿ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ನಾನು ಒಂದು ಉದಾಹರಣೆ ಕೊಡಲು ಹೊರಟಿದ್ದೆ. ಒಂದೂರಿನಲ್ಲಿ ರಾಜಣ್ಣ, ಬನಣ್ಣ ಎಂಬ ಇಬ್ಬರು ಸ್ನೇಹಿತರಿದ್ದರು. ರಾಜಣ್ಣ ಎಡಗೈನವನು ಮತ್ತು ಶ್ರೀಮಂತ. ಬನಣ್ಣ ಬಲಗೈ ಮತ್ತು ಬಡವ. ಒಮ್ಮೆ ಬಡತನ ತಾಳಲಾರದೆ ರಾಜಣ್ಣನವರ ಹತ್ತಿರ ಹೋಗಿ ಏನಾದರೂ ಸಹಾಯ ಕೇಳಿ ಎಂದು ಬನಣ ನ ಹೆಂಡತಿ ಹೇಳಿದಳು. ಅದರಂತೆ ಬನಣ್ಣ ಸಹಾಯ ಕೇಳಲು ರಾಜಣ್ಣನ ಬಳಿಗೆ ಹೋಗಿ ಕೇಳಿದ. "ಹೋಗಯ್ಯ ನಾನೇನು ಧರ್ಮ ಇಟ್ಟಿಲ್ಲ. ದೆವ್ವ ಬಂದಂತೆ ಬಂದಿದ್ದಿ, ತೆಗೆದುಕೋ" ಎಂದು ಹೇಳಿ ಒಂದು ರೂಪಾಯಿ ಒಗೆದು, ದೆವ್ವ ತೊಲಗಿ ಹೋಗು ಎಂದು ಗದರಿಸಿದ. ಬನಣ್ಣ ಆ ರೂಪಾಯಿಯನ್ನು ರಾಜಣ್ಣ ದೆವ್ವದ ಹೆಸರಲ್ಲಿ ಕೊಟ್ಟಿದ್ದಾನೆ ನನಗೆ ಸಲ್ಲತಕ್ಕದ್ದಲ್ಲ. ದೆವ್ವಕ್ಕೆ ಸಲ್ಲಿಸುತ್ತೇನೆಂದು ಕಾಡಿಗೆ ಹೋಗಿ ದೆವ್ವಕ್ಕಾಗಿ ನಿರೀಕ್ಷಣೆ ಮಾಡುತ್ತಿದ್ದ. ಅಷ್ಟರಲ್ಲಿ ಯಾರೋ ಬಂದು, ಯಾಕಪ್ಪಾ ಯೋಚಿಸುತ್ತಿದ್ದೀಯಾ ಎಂದು ಕೇಳಿದರು. ಇವನು ನಡೆದ ವಿಚಾರವೆಲ್ಲಾ ಹೇಳಿದ. ನಾನೇ ದೆವ್ವ, ಆ ರೂಪಾಯಿ ನನಗೆ ಕೊಡು, ನಿನಗೇನು ಬೇಕು ಕೇಳು ಎಂದು ಹೇಳಿತು. ನನ್ನ ಬಡತನ ಹೋಗಬೇಕೆಂದು ಇವನು ಕೇಳಿಕೊಂಡ ಸರಿ. ಈ ಬೀಸುವ ಕಲ್ಲು ತೆಗೆದುಕೊಂಡು ಹೋಗು. ನೀನ ಕೇಳಿದ್ದೆಲ್ಲಾ ಕೊಡುತ್ತದೆ ಎಂದು ಹೇಳಿ ಬೀಸುವ ಕಲ್ಲನ್ನು ಕೊಟ್ಟು ಕಳುಹಿಸಿತು. ಮನೆಗೆ ಬಂದು ಅಕ್ಕಿ ಬೇಕೆರೆದು ಬೀಸುವ ಕಲ್ಲಿಗೆ ಕೇಳಿದ. ಬೀಸುವ ಕಲ್ಲು ಹತ್ತು ಪಲ್ಲ ಅಕ್ಕಿ ಕೊಟ್ಟಿತು. ಇನ್ನು ಸಾಕು ನಿಲ್ಲಿಸು ಎಂದ ಶ್ರೀಮಂತನಾಗುತ್ತಲೂ ಬಂದ. ಈ ವಿಚಾರ ರಾಜಣ ನಿಗೆ ಗೊತ್ತಾಗಿ ಕೊಚ್ಚಿ ಉರಿ ಬಂದು ಅವನಂದ. ಉಪಾಯ ಮಾಡಿ ಬೀಸುವ ಕಲ್ಲನ್ನು ತೆಗೆದುಕೊಂಡ. ಬೀಸುವ ಕಲ್ಲನ್ನ ಒಂದು ದೋಣಿಯಲ್ಲಿಟ್ಟುಕೊಂಡು ಯಾರೂ ಇಲ್ಲದ ಕಡೆ ಮಧ್ಯ ನದಿಯಲ್ಲಿ ಹೋಗಿ ಬಂಗಾರ, ವಜ್ರ ವೈಡೂರ್ಯ ಎರ್ನಾ ಬರಲಿ ಎಂದ. ಅದು ಬೀಸುತ್ತಾ ಹೋಯಿತು. ದೋಣಿಯೆಲ್ಲ ವಜ್ರ ವೈಡೂರ್ಯಗಳು ತುಂಬುತ್ತಾ ಹೋಯಿತು. ಆದರೂ ಇವನಿಗೆ ತೃಪ್ತಿಯಾಗದೆ ಇನ್ನು ನಿಲ್ಲಿಸು ಎಂದು ಹೇಳಲಾಗುತ್ತಲಿಲ್ಲ. ಭಾರವಾಗಿ ಸಾಮಾನು ಸಹಿತ ಮುಳುಗಿ ಹೋದ. ಹೀಗೆ ಅತಿ ಆಸೆಯಿಂದ ಬನಣ್ಣನಿಗೂ ತೊಂದರೆ ಕೊಟ್ಟ ತಾನೂ ಹಾಳಾದ. ಇಂತಹ ಮನೋಭಾವ ಮುಖಂಡರಲ್ಲಿ ಹೋಗಬೇಕು 'ಸರ್ವೇ ಜನಾಃ ಸುಖಿನೋ ಭವಂತು' ಎಂಬ ಮನೋಭಾವನೆ ಮುಖಂಡರಲ್ಲಿ ಬೆಳೆದು ಎಲ್ಲ ಬುಡಕಟ್ಟುಗಳ ಉನ್ನತಿಗೂ ಪ್ರಯತ್ನಿಸಲೆಂದು ತಾರೈಸುತ್ತೇನೆ.

ಅನುಸೂಚಿತ ಜಾತಿಗಳಿಗೆ ಕೆಡಕುಬಯಸತಕ್ಕವರು ಇಂದ ಮಾನವ ದ್ರೋಹಿಗಳಾಗುತ್ತಾರೆ. ಅಂತಹವರಿಗೆ ಜನತೆಯೇ ಬುದ್ಧಿ ಕಲಿಸಬಲ್ಲುದು ಹೀಗಿರುವಾಗ ಕೆಲಸಗಳನ್ನು ತಾಳ್ಮೆಯಿಂದ ಯುಕ್ತಿಯಿಂದ ಸಾಧಿಸಬೇಕೇ ಹೊರತು ಆಗ್ರಹದಿಂದ ಸಾಧಿಸುವುದು ಬುದ್ಧಿವಂತಿಕೆಯಾಗಲಾರದು. ಎಲ್ಲರಿಗೂ ಸ್ವಾವಲಂಬಿಯಿರುವಾಗ ಮೇಲಾಗಿ ಸರಕಾರಕ್ಕೆ ಅನುಸೂಚಿತ ಜಾತಿಗಳ ಬಗ್ಗೆ ಕಳಕಳಿಯವಾದ ಅಭಿಮಾನವಿರುವಾಗ ಈ ನಿರ್ಣಯ ತಂದರೆ ಅಭಿಮಾನಿಗಳ ಮೇಲೆ ಸಂಶಯಪಟ್ಟಂತಾಗುತ್ತದೆ.

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ಪುದಿಲ್ಲವೇ ? ಅಭಿಮಾನಿಗಳ ಮನಸ್ಸನ್ನು ನೋಯಿಸಿದಂತಾಗುವುದಿಲ್ಲವೇ ? ಎಂದು ಮಾನ್ಯ ನಿರ್ಣಯದ ಸೂಚಕರನ್ನು ಸೂಕ್ಷ್ಮವಾಗಿ ಪ್ರಶ್ನಿಸುತ್ತೇನೆ. ಹಾಗೂ ನಿರ್ಣಯವನ್ನು ಒತ್ತಾಯಿಸದಿರುವುದು ಅಂದರೆ ಮತಕ್ಕೆ ಹಾಕುವುದು ಅಷ್ಟು ಸಾಧುವಾದದ್ದಲ್ಲವೇನೋ ಎಂತಲೂ ಹೇಳಬಯಸುತ್ತೇನೆ. ಒಟ್ಟಿನಲ್ಲಿ ನಿರ್ಣಯದ ವಿಚಾರಕ್ಕೆ ನನ್ನ ಹೃತ್ಪೂರ್ವಕ ಬೆಂಬಲವುಂಟು ಎಂದು ಹೇಳಿ 'ಹರಿಜನ ಗಿರಿಜನಂ ಬಾಳ್ಗ, ಭಾರತ ದೇಶಂ ಗೆಲ್ಗ' ಎಂದು ಅಪೇಕ್ಷಿಸುತ್ತೇನೆ.

[MR. SPEAKER in the Chair.]

†ಶ್ರೀ ಎ. ಕೃಷ್ಣಶೆಟ್ಟಿ (ಮಂಗಳೂರು-11).—ಮಾನ್ಯ ಅಧ್ಯಕ್ಷರೇ, ಈ ನಿರ್ಣಯದ ಸಂಬಂಧದಲ್ಲಿ ಒಂದೆರಡು ವಿಷಯಗಳನ್ನು ಈ ಸಭೆಯ ಮುಂದೆ ಇಡಲಿಕ್ಕೆ ನಿಂತಿದ್ದೇನೆ. ಇದೇನೋ ಒಳ್ಳೆಯ ನಿರ್ಣಯ ಹಿಂದುಳಿದ ವರ್ಗದವರಿಗಾಗಿ ಸೌಲಭ್ಯ ಕೊಡುವ ಹಾಗೆ, ಪೆಡ್ಯೂಲ್ಡ್ ಕ್ಯಾಸ್ಟ್ಸು, ಷೆಡ್ಯೂಲ್ಡ್ ಟ್ರೈಬುಗಳವರಿಗಾಗಿ ಸರಕಾರದ ಹುದ್ದೆಗಳಲ್ಲಿ ಅವರಿಗೆ ಸರಿಯಾದ ಸ್ಥಾನಗಳನ್ನು ಕೊಟ್ಟಿಲ್ಲ. ಹಾಗೂ ಅವರಿಗೆ ಸರಕಾರಿ ನೌಕರಿಯಲ್ಲಿ ಪದ್ಧತಿ ಕೊಟ್ಟಿಲ್ಲ; ಕೊಡಬೇಕು ಎಂದು ಯಾವ ಒಂದು ಆಶ್ವಾಸನೆಯನ್ನು ಸರಕಾರ ಕೊಟ್ಟಿಲ್ಲ. ಅವರು ಇತರರಿಗಿಂತಲೂ ಹಿಂದೆ ಬಿದ್ದಿದ್ದಾರೆನ್ನುವುದು ಸರಿಯಾದುದು. ಆದರೆ ಇಷ್ಟೆಲ್ಲಾ ಮಾತನಾಡುವವರು ಏನು ಹೇಳಿದರು ಎಂದರೆ ಅವರ ನಿಜವಾಗಿಯೂ ಹರಿಜನರ ಅಭಿವೃದ್ಧಿಯ ಬಗ್ಗೆ ಮಾತನಾಡಿದವರಲ್ಲ. ಏಕೆಂದರೆ ಹರಿಜನರು ಹಾಗೂ ಷೆಡ್ಯೂಲ್ಡ್ ಕ್ಯಾಸ್ಟು ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ಗಳವರು ಯಾರಿದ್ದಾರೆಯೋ ಅವರನ್ನು ಸರಕಾರದ ಕೆಲಸಗಳಿಗೆ ನೇಮಕ ಮಾಡುವುದರ ಮಟ್ಟಿಗೆ ಮಾತ್ರ ಅವರೆಲ್ಲ ಹೇಳಿದರು. ಈ ಹರಿಜನರು ಹಳ್ಳಿಯಲ್ಲಿ ಕೂಲಿಗಾರರಾಗಿದ್ದಾರೆ. ಹರಿಜನರು ಕಾಫೀ ತೋಟಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹರಿಜನರು ಅಲ್ಲಿ ಬಹಳ ಹೆಚ್ಚಿನ ತೊಂದರೆಗೆ ಸಾಮಾಜಿಕವಾಗಿ ಒಳಗಾಗಿದ್ದಾರೆ. ಅಂತಹ ಸ್ಥಿತಿಯಲ್ಲಿರುವ ಹರಿಜನರಿಗೆ ಕೂಲಿ ಹನ್ನೆರಡು ಆಣೆವಾ ಹದಿನಾಲ್ಕು ಆಣೆಯು ಮೇಲ್ಪಟ್ಟು ಕೊಡುತ್ತಿಲ್ಲ. ಇಂತಹವರ ಸ್ಥಿತಿಯು ಬಗ್ಗೆ ಯಾವ ಒಂದು ಶಬ್ದವನ್ನೂ ಇಲ್ಲಿ ಎತ್ತಿಲ್ಲ. ಏನೊಂದನ್ನೂ ಹೇಳಿಲ್ಲ. ಸಾಮಾಜಿಕವಾಗಿ ಹಿಂದುಳಿದವರು ಅಭಿವೃದ್ಧಿಯಾಗದೇ ಇದ್ದರೆ ಸಮಾಜವು ಮುಂದೆ ಬಂದೀತೇ ? ಸಮಾಜದಲ್ಲಿ ನಿಜವಾದ ಬಡವರು ಯಾರು ಎನ್ನುವುದನ್ನು ಘಟ್ಟಿತಾತ್ಮಕವಾಗಿ ಹೇಳಿಲ್ಲ. ಇಂತಹ ಸಂಶಯಗ್ರಸ್ತವಾದ ಒಂದು ವಿಷಯದಲ್ಲಿ ಈ ಒಂದು ನಿರ್ಣಯ ಮಾಡುವುದು ಸರಿಯೇ ಎಂದು ಕೇಳುತ್ತೇನೆ. ನಿಜವಾಗಿಯೂ ಬಡ ಕೆಲವು ಹುದ್ದೆಗಳಿಗೆ ಇವರನ್ನು ನೇಮಕ ಮಾಡಲು ಮಾತ್ರ ನೀವು ಈ ನಿರ್ಣಯ ತಂದಿಲ್ಲ. ಬಹು ದೊಡ್ಡ ಅನ್ಯಾಯವಾಗಿದೆ ಎಂದು ಇಲ್ಲಿ ಸದಸ್ಯರು ಮಾತನಾಡಿದರು. ತಾವು ಸಾಮಾಜಿಕವಾಗಿ ಸೌಲಭ್ಯವಿಲ್ಲದವರಿಗೆ ಅನ್ಯಾಯವಾಗದ ರೀತಿಯಲ್ಲಿ, ಕಾರ್ಯಕ್ರಮ ತೆಗೆದುಕೊಳ್ಳಲು ಇದನ್ನು ತರಲಿಲ್ಲ ಎಂದು ನಾನಿಲ್ಲಿ ಹೇಳಬೇಕಾಗಿದೆ.

ಇನ್ನು ಈ ರಾಜೀನಾಮೆ ಇಲ್ಲಿ ಬಂದದ್ದೇ ಅಲ್ಲ. ಈ ಸೋಷಿಯಲ್ ವೆಲ್‌ಫೇರ್ ಬೋರ್ಡಿನ 23 ಷೆಡ್ಯೂಲ್ಡ್ ಕಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬಿಗೆ ಸೇರಿದ ಸದಸ್ಯರು ಬೋರ್ಡಿಗೆ ರಾಜೀನಾಮೆ ಕೊಟ್ಟಿದಾರೆ. ಪತ್ರಿಕೆಯಲ್ಲಿ ತಿಳಿದ ಪ್ರಕಾರ ಇವರು ಶ್ರೀ ಸಂಜೀವಯ್ಯನವರಿಗೆ ರಾಜೀನಾಮೆಯನ್ನು ಕಳುಹಿಸಿದರು. ಈ ರಾಜೀನಾಮೆಯನ್ನು ಅವರಿಗೆ ಕಳುಹಿಸಿದ ಉದ್ದೇಶವೇನು ? ಅವರು ಹರಿಜನ ಕಾಂಗ್ರೆಸ್ ಪ್ರೆಸಿಡೆಂಟ್ ಆದ್ದರಿಂದ ಅವರಿಗೆ ಕಳುಹಿಸಿದರು. ಕಳುಹಿಸಿದವರಲ್ಲಿ ಎಲ್ಲರೂ ಕಾಂಗ್ರೆಸ್ಸಿನವರು ಅಲ್ಲವೇ ಅಲ್ಲ. ಬಾಕಿ ಪಾರ್ಟಿಗೆ ಸೇರಿದವರು ಕೂಡ ಶ್ರೀ ಸಂಜೀವಯ್ಯನವರಿಗೆ ರಾಜೀನಾಮೆ ಕಳುಹಿಸಿದರು. ಹೀಗಾಗಿ, ಇದರಲ್ಲಿರುವ ಈ ನ್ಯಾಯವನ್ನು ಇಲ್ಲಿ ಮಾತ್ರ ಬೇಡಿಲ್ಲ. ಶ್ರೀ ಸಂಜೀವಯ್ಯನವರವರಿಗೆ ಹೋಗುವುದರ ಅರ್ಥವೇನು ? ಇದರಲ್ಲಿ ಕಾಂಗ್ರೆಸ್ ಎಂ. ಎಲ್. ಎ. ಗಳೂ ಇರುತ್ತಾರೆ. ಇವರು ಸರಕಾರದ ಮೇಲೆಯೇ ಈರೀತಿ ಮಾಡುತ್ತಾರೆಯೇ! ಒಂದು ನ್ಯಾಯವನ್ನು ಈ ಅಸೆಂಬ್ಲಿಯಲ್ಲಿ ತೋರಿಸಿ, ಆಮೇಲೆ ಕೇಂದ್ರಕ್ಕೆ ತೋರಿಸಬೇಕೆಂದು ಈರೀತಿ ಈ ಸರಕಾರದ ಮೇಲೆ ಮಾಡಿರುವುದಕ್ಕೆ ಕಾರಣಗಳನ್ನು ಕೊಟ್ಟಿಲ್ಲ. ಈ ನಿರ್ಣಯ ಬರುವ ಹೊತ್ತಿಗೆ ರಾಜೀನಾಮೆಯನ್ನು ಹಿಂದಕ್ಕೆ ತೆಗೆದುಕೊಂಡಿದ್ದರು.

ಶ್ರೀ ಗೋಪಾಲ ಸಾರಥಿ.—ತೆಗೆದುಕೊಂಡಿಲ್ಲ.

ಶ್ರೀ ಎ. ಕೃಷ್ಣಶೆಟ್ಟಿ.—ರಾಜೀನಾಮೆ ಹಿಂದಕ್ಕೆ ತೆಗೆದುಕೊಂಡಿದ್ದಾರೆಂದು ಹೇಳಿ ಹೇಳಿಕೆ ಬಂದಿದೆ. ಈ ಖಾತೆಗೆ ಸಂಬಂಧಪಟ್ಟ ಮಂತ್ರಿವರ್ಯರು ಇಲ್ಲಿಯೇ ಹೇಳಿದರು; ಏನು ಅಂತ ಹೇಳಿದರು ಅಂದರೆ 27 ಜನರು ರಾಜೀನಾಮೆಯನ್ನು ಕೊಟ್ಟರು; ರಾಜೀನಾಮೆ ಕೊಟ್ಟವರು ಪಶ್ಚಾತ್ತಾಪ ವ್ಯಕ್ತಪಡಿಸಿ ಹಿಂದಕ್ಕೆ ತೆಗೆದುಕೊಂಡರು ಎಂದು ಇದನ್ನು ನಾನು ಏಕೆಹೇಳುತ್ತಿದ್ದೇನೆಂದರೆ, ಆ ರೀತಿಯ ಒಂದು ಕೆಲಸಮಾಡಿ ಕೆಲವು ನ್ಯಾಯಗಳನ್ನು ಪಡೆಯಲಿಕ್ಕೇ ಬೇಕು, ಎಂದಾಗ, ನ್ಯಾಯವನ್ನು

ಯಾವುದೇ ಸರ್ಕಾರದ ಮುಂದೆ ಇದುವಾಗ ನಿಶ್ಚಿತ, ನಿರ್ಧಾರ, ಧೃಢತೆ ಇರಬೇಕು. ಇಡೀ ಜನ ಸಂಖ್ಯೆಯ ಒಂದು ಕಾರ್ಯಕ್ರಮ ಅವರ ಹಿಂದೆ ಇರಬೇಕು. ಇಲ್ಲದಿದ್ದರೆ ಅದು ಸಮಾಧಾನವಾಗಿ ಕಾಣುವುದಿಲ್ಲ. ಈಗ ನೀವು ಕೆಲವರಿಗೆ ಮಾತ್ರ ನ್ಯಾಯ ಬೇಡಿದರೆ ಕೆಲವರಿಗೆ ಮಾತ್ರ ರೊಟ್ಟಿ ತುಂಡುಗಳು ಸಿಗುತ್ತವೆ. ಕೆಲವು ಜನರನ್ನು ಮಾತ್ರ ಅಭಿವೃದ್ಧಿ ಮಾಡುವುದು ಸಮಾಜವಾದಿ ವಾದದ ಕಾರ್ಯವಲ್ಲ. ಇಡೀ ಸಮಾಜವು ಅಭಿವೃದ್ಧಿಯಾಗುವ ರೀತಿಯಲ್ಲಿ ನಿರ್ಣಯಬರಬೇಕಾಗಿತ್ತು. ಇಲ್ಲಿ ಸಮಾಜ, ಸಾಂಪತ್ತಿಕವಾಗಿ ಮಾತ್ರವಲ್ಲ, ಸಾಮಾಜಿಕ, ಮತ್ತು ಇನ್ನಿತರ ರೀತಿಯಲ್ಲಿಯೂ ಬಹಳ ಹಿಂದೆ ಬಿದ್ದಿದೆ. ಅದು ಶೋಷಣೆಗೆ ಒಳಗಾಗಿದೆ. ಆ ಶೋಷಣೆಯಿಂದ ಬಿಡುಗಡೆ ಮಾಡಲು ಸಾಮಾಜಿಕ ಬದಲಾವಣೆಗಳು ಬರಬೇಕು. ವಿದ್ಯೆಯೂ ಕೂಡ ಸಿಗಬೇಕು. ಈ ದಿವಸ ಹರಿಜನ ಮಕ್ಕಳು ಮಠಗಳಿಗೆ ಬಾಕಿಯವರಿಗೆ ಎಷ್ಟು ವಿದ್ಯೆ ಸಿಗಲು ಅವಕಾಶವಿದೆ, ಅಷ್ಟೇ ಅವಕಾಶ ಅವರಿಗಿದೆ. ಅವರೂ ಮುಂದೆ ಬಂದಿದ್ದಾರೆ. ಅವರೆಲ್ಲ ಕೆಲವು ಜನರಿಗೆ ಕೆಲಸವಾಗಿಲ್ಲವೆನ್ನುವುದು ಒಂದು ಪ್ರಶ್ನೆಯಲ್ಲ. ಸಮಗ್ರವಾಗಿ ಸಮಾಜ ಬೆಳೆದು ಬರಬೇಕು. ಆದರೆ ಸರಕಾರ ಯಾವ ರೀತಿ ಮಾಡುತ್ತಿದೆ. ಅದು ಸಮಾಜವನ್ನು ಒಟ್ಟಿಗೆ ಮುಂದಕ್ಕೆ ತರಲು ಪ್ರಯತ್ನಿಸುವುದರ ಬದಲು ಜಾತಿಯ ಆಧಾರದಮೇಲೆ ಅವಕಾಶವನ್ನು ಕಲ್ಪಿಸುತ್ತಿದೆ. ಸರಕಾರಕ್ಕೆ ಕೂಡ ಪೂನಾಪ್ಯಾಕ್ಟ್ ನೆನಪಿನಲ್ಲಿರಬಹುದು. ಮಹಾತ್ಮಗಾಂಧಿಯವರು ಜಾಯಿಂಟ್ ಎಲೆಕ್ಟೊರೇಟ್ ಇರಬೇಕೆಂದು ಹೇಳಿದರೆ, ಡಾ॥ ಅಂಬೇಡ್ಕರ್ ರವರು ಸಪರೇಟ್ ಎಲೆಕ್ಟೊರೇಟನ್ನು ಕೇಳಿಲು ಕಾರಣವೇನು? ಕಾರಣ, ಮುಖ್ಯವಾಗಿ ಅವರ ಒಂದು ಹಿತ ಪ್ರತ್ಯೇಕವಾಗಿ ಇದ್ದರೆ ಅದೀತು, ಒಟ್ಟಿಗೆ ಇದ್ದರೆ ಆಗಲಿಕ್ಕಿಲ್ಲ, ತುಂಬ ತೊಂದರೆಯಾದೀತು ಎಂದು. ಕೆಲವು ಹಿತದಾರರು ಸಾಮಾಜಿಕವಾಗಿ ಪ್ರತ್ಯೇಕವಾಗಿದ್ದು, ಅವರಿಗೇ ಕೆಲವು ನವಲತ್ತುಗಳನ್ನು ಕೊಡುವುದಾದರೆ, ಇಡೀ ಸಮಾಜ ಒಟ್ಟಿಗೆ ಸೇರಿ ಬರಲಿಕ್ಕೆ ಅಸಾಧ್ಯ ಎಂದು ಮಹಾತ್ಮಗಾಂಧಿಯವರು ಹೇಳಿದ ನ್ಯಾಯ ಬಹಳ ಗಣನೀಯವಾದ ವಿಷಯ. ಸರಕಾರ ಇದನ್ನು ನೆನಪಿನಲ್ಲಿಟ್ಟುಕೊಂಡು ಕೆಲಸಮಾಡುತ್ತಿದೆಯೇ? ಸರಕಾರ ಸಮಾಜದಲ್ಲಿ ಕೆಲವರ ಹಿತಸಾಧನೆಗಾಗಿ, ಪ್ರತ್ಯೇಕವಾಗಿ ಕೆಲಸಮಾಡುತ್ತಾ ಇದ್ದಾರೆ ಇದು ನಿಜವಾಗಿ ಅಕ್ಷಮ್ಯ ಅಪರಾಧವಾದೀತು. ಅದನ್ನು ನಾವು ಮಾಡಬಾರದು ಅನ್ಪೃಶ್ಯತೆ ಎನ್ನುವುದೇ ಇಲ್ಲ. ಜಾಯಿಂಟ್ ಎಲೆಕ್ಟೊರೇಟಗೋಸ್ಕರ ಮಹಾತ್ಮಗಾಂಧಿಯವರು ಉಪವಾಸ ಮಾಡಿದರು. ಆದರೆ ಸರಕಾರ ಅನುಸರಿಸಿದ ಧೋರಣೆ ಏನು? ಕೆಲವು ಜನಾಂಗಗಳು ಮುಂದೆ ಬರಬೇಕೆಂದು ಅವರಿಗೆ ಕೆಲಸಗಳನ್ನು ಒದಗಿಸುತ್ತಿದ್ದಾರೆ. ಇಡೀ ಸಮಾಜ ಅಭಿವೃದ್ಧಿಯಾಗುವ ರೀತಿಯಲ್ಲಿ ಕೆಲಸಮಾಡುತ್ತಿಲ್ಲ. ಇವತ್ತಿನ ಪ್ರಶ್ನೆ ಬಹಳ ಜಟಿಲವಾದುದು. 23 ಜನರು ರಾಜೀನಾಮೆ ಕೊಟ್ಟದ್ದು, ಆಡಳಿತ ಪಕ್ಷದವರು ಹರಿಜನರ ಬಗ್ಗೆ ಎಷ್ಟು ಕಠಿಣವಾಗಿದ್ದಾರೆ ಎಂದು ತೋರಿಸಲು, ಹರಿಜನರಿಗೆ ಕೆಲಸ ಸಿಗಲಲ್ಲ ಎಂಬ ಒಂದು ನಿರ್ಣಯವನ್ನು ತಂದು ಮಾತನಾಡಲು ಅವಕಾಶ ಕೊಟ್ಟದ್ದು, ಸರಕಾರದ ಆಡಳಿತ ಧೋರಣೆ ತೋರಿಸುತ್ತದೆ. ಈ ಧೋರಣೆ ಬರುವುದಕ್ಕೆ ಕಾರಣವೇನು? ಅವರು ಬಾಕಿ ವಿಷಯದ ಬಗ್ಗೆ ಅನುಸರಿಸುತ್ತಿರುವ ನೀತಿಯೇ. ಇಡೀ ಸಮಾಜದ ಸಾಂಪತ್ತಿಕ ಸಮಾನತೆಗಳನ್ನು ತರುವ ದೃಷ್ಟಿಯಲ್ಲ ಕೆಲಸಗಳನ್ನು ಮಾಡಿಕೊಂಡು ಬರುತ್ತಾ ಇದ್ದರೆ ಈ ಧೋರಣೆಗೆ ಇಲ್ಲ ಅವಕಾಶವಿರುತ್ತಿರಲಲ್ಲ. ಆದ್ದರಿಂದ ಸರಕಾರದ ಇಂದಿನ ಧೋರಣೆ ಇಂಥ ಒಂದು ಪರಿಸ್ಥಿತಿಯನ್ನು ಉಂಟುಮಾಡಲಿಕ್ಕೆ ಮುಖ್ಯ ಕಾರಣವಾಗಿದೆ.

ನನ್ನ ಸ್ವಂತ ಅನುಭವದ ಮಾತು ಹೇಳುತ್ತೇನೆ. ನಾನು ಬರುವ ಜಿಲ್ಲೆಯಲ್ಲಿ, ಉಡುಪಿಯಲ್ಲಿ ಶ್ರೀ ಕೃಷ್ಣ ಕನಕನ ಕಡೆಗೆ ಮುಖ ತಿರುಗಿಸಿದ್ದಾನೆ. ಅಲ್ಲಿ ಕನಕನಕಂಡಿ ಅಂತ ಉಂಟು. ಕನಕ ಒಬ್ಬ ಹರಿಜನ. ಕನಕದಾಸರು ಜಾತಿ ಜಾತಿ ಅನ್ನಬೇಡಿ, ಜಾತಿ ಅನ್ನುವುದೇ ಇಲ್ಲವೆಂದು ಹೇಳಿದರು ಅದನ್ನು ನೀವೆಲ್ಲರೂ ನಂಬಿ ಕನಕ ಹೇಳಿದ ನ್ಯಾಯವನ್ನು ನೀವು ನಂಬುತ್ತೀರ? ಎಲ್ಲಿದ್ದಾನೆ ದೇವರು ಅನ್ನುವುದನ್ನು ಮಹಾತ್ಮಗಾಂಧಿಯವರು ಹೇಳಿದ್ದಾರೆ. ದೇವರು ಬಡವನಿಗೆ ಅವನು ತಿನ್ನುವ ಅನ್ನದಲ್ಲಿ ಕಾಣುತ್ತಾನೆ ಎಂದು ಈ ನ್ಯಾಯವನ್ನು ನೀವು ಒಪ್ಪುತ್ತೀರ. ಜನಕನಿಗೆ ಧರ್ಮವ್ಯಾಧ ಧೋಧನೆ ಕೊಟ್ಟದ್ದಾನೆ ಇದನ್ನು ನಂಬುತ್ತೀರ? ಜನಕ ಕರ್ಮಯೋಗಿಯಾಗಿ ಬೆಳೆದ. ಅದನ್ನು ನಂಬುತ್ತೀರ? ಹಾಗಾದರೆ ದೇವರ ವಿಷಯವನ್ನು ಮಾನವೀಯತೆಯ ದೃಷ್ಟಿಯಿಂದ ನಾವು ನೋಡಬೇಕಾಗಿದೆ. ಪ್ರತ್ಯೇಕವಾಗಿ ಅವನನ್ನು ನಮಸ್ಕಾರ ಮಾಡುವ ದೃಷ್ಟಿಯಿಂದ ನೋಡಬೇಕಾಗಿಲ್ಲ. ನಮ್ಮ ಜಿಲ್ಲೆಯಲ್ಲಿ ಕರಿಕುಡಿಕೆಯವರು ಬಹಳ ಕಷ್ಟಪಟ್ಟು ಕೆಲಸ ಮಾಡುವವರು, ಬೇಟೆ ಆಡುವವರು. ಇಂಥ ಒಂದು ಕಷ್ಟ ಜೀವನವನ್ನು ನಡೆಸಬೇಕಾಗಿದೆ, ಅವರು ಷೆಡ್ಯೂಲ್ಡ್ ಕ್ಯಾಸ್ಟ್ಸ್, ಮರಾಠಿ ನಾಯಕರು, ಷೆಡ್ಯೂಲ್ಡ್ ಟ್ರೈಬ್ಸ್ ಹೀಗೆ ಏಕೆ ಮಾಡಿದ್ದಾರೆ? ಕೆಲವರನ್ನು ಅಬ್ರಾಹ್ಮಣರನ್ನಾಗಿ ಮಾಡಿದ್ದೀರಿ, ಕೆಲವರನ್ನು ಬ್ರಾಹ್ಮಣರನ್ನಾಗಿ ಮಾಡಿದ್ದೀರಿ. ಕೊರಗರು ಈ ಜಿಲ್ಲೆಯಲ್ಲಿ ಎಷ್ಟು ಬೆಳೆದು ಬಂದಿದ್ದಾರೆ? ಅಗ್ರಿಕಲ್ಚರ್ ಫಾರಂ ಸೊಸೈಟಿ ಇರಬಹುದು. ಅದನ್ನು ಮಾಡಿಕೊಂಡರೆ, ಕೋ-ಆಪರೇಟೀವ್ ಫಾರಂ ಆಗುತ್ತದೆಯೇ?

(ಶ್ರೀ ಎ. ಕೃಷ್ಣಶೆಟ್ಟಿ)

ಎಷ್ಟು ಜನ ಕರಿಯಕುಡಿಕೆಯವರು, ಕೊರಗರು, ಮಾರಾಟ ನಾಯಕರು ಕೆಲಸದಲ್ಲಿದ್ದಾರೆ, ಹಳ್ಳಿಯಲ್ಲಿರುವ ಇಂಥ ಬಹಳ ಹಿಂದುಳಿದವರಿಗೆ ಏನು ಕೆಲಸ ಸಿಕ್ಕಿದೆ? ದಕ್ಷಿಣ ಕನ್ನಡ ಜಿಲ್ಲೆಯ ಒಂದೊಂದು ಮೂರೆಯಲ್ಲಿ ಇಂಥವರು ಎಷ್ಟು ಜನರಿದ್ದಾರೆ? ಅವರನ್ನು ನೋಡುವುದಿಲ್ಲ. ಹರಿಜನರ ಮಟ್ಟಿಗೆ ನನಗೂ ಪ್ರೀತಿ ಇದೆ. ಮಜೂರಿ ಕೆಲಸ ಮಾಡುವ ರೈತರು ಮತ್ತು ಇತರ ಕೆಲಸಮಾಡುವ ಹರಿಜನರು ಮತ್ತು ಹಿಂದುಳಿದವರು ಎಷ್ಟೋ ಜನರಿದ್ದಾರೆ. ಅಂಥವರಿಗೆಲ್ಲ ಕೆಲಸಕ್ಕೆ ಸರಿಯಾದ ಮಜೂರಿ ಸಿಕ್ಕಬೇಕು ಎಂದು ಹೇಳುತ್ತೇನೆ. ತೋಟದಲ್ಲಿ, ಗದ್ದೆಯಲ್ಲಿ ಕೆಲಸ ಮಾಡುವವರಿದ್ದಾರೆ. ಇಂಥವರಿಗೂ ಸರಿಯಾದ ಮಜೂರಿ ಸಿಕ್ಕಬೇಕು. ಇವರೆಲ್ಲ ಬಹಳ ಕಷ್ಟದಲ್ಲಿದ್ದಾರೆ. ಮಾನ್ಯ ಸದಸ್ಯರು ಮಾತನಾಡುವಾಗ ಇವರ ವಿಚಾರವನ್ನು ಹೇಳಲಿಲ್ಲವಲ್ಲ. ಇವರ ಬಗ್ಗೆ ಅಭಿಮಾನವಿಲ್ಲವಲ್ಲ ಎಂದು ಮರುಕಪಡುತ್ತೇನೆ. ಈ ತರಾವಿನಲ್ಲಿ ಸೂಚಿಸಿರುವಂತೆ ಅವರಿಗೆ ಕೆಲಸ ಸಿಕ್ಕಬೇಕು. ಅದೇ ಹೊತ್ತಿಗೆ ಅವರ ಬಂಧುಗಳು ಬಹಳ ಹಿಂದುಳಿದವರು, ಹಳ್ಳಿಯ ರೈತ ಇವರ ಬಗ್ಗೆಯೂ ಅಭಿಮಾನವಿರಬೇಕು. ಹಳ್ಳಿಯಲ್ಲಿ ಅವರ ಮನೆಗಳು ದೂರದಲ್ಲಿ, ಕೋಳಿಯ ಕೂಗು ಕೇಳುವಷ್ಟು ದೂರದಲ್ಲಿವೆ. ಪಶುಗಳಂತೆ, ಮೃಗಗಳಂತೆ ಇರುವ ಎಷ್ಟು ಜನರಿದ್ದಾರೆ, ಅವರ ಸ್ಥಿತಿಯನ್ನೂ ಉತ್ತಮಪಡಿಸಿಲ್ಲ. ಇಂಥ ಒಂದು ನೀತಿಯನ್ನು ಸರ್ಕಾರ ಬೆಳಸಿಕೊಂಡು ಬಂದಿದೆ. ಯಾರು ಬಹಳ ಹಿಂದೆ ಉಳಿದಿದ್ದಾರೆ ಅವರನ್ನು ಮುಂದೆ ತರುವುದಕ್ಕೆ ಬದಲು ಮುಂದೆ ಇರುವವರನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ.

† ಶ್ರೀ ಬಿ. ಎಚ್. ಲಕ್ಷ್ಮಣಯ್ಯ (ಬೇಲೂರು).—ಈ ದಿವಸ ನಮ್ಮ ಮುಂದಿರತಕ್ಕ ಖಾಸಗಿ ನಿರ್ಣಯದಲ್ಲಿ ಕೇಳಿರುವ ವಿಷಯ ಹೀಗೆ ಇದೆ.

"ಸರ್ಕಾರೀ ಸೇವೆಯಲ್ಲಿ ಹಿಂದುಳಿದ ವರ್ಗಗಳು ಮತ್ತು ಅನುಸೂಚಿತ ಜಾತಿಗಳಿಗೆ ಸಾಕಾ ದಷ್ಟು ಪ್ರಾತಿನಿಧ್ಯಕೊಡುವ ದೃಷ್ಟಿಯಿಂದ ಸರ್ಕಾರೀ ಸೇವೆಯಲ್ಲಿ ಮೊದಲು ನೇಮಕ ಮಾಡುವ ಕಾಲದಲ್ಲಿಯೂ, ಸೆಲೆಕ್ಷನ್ ಹುದ್ದೆಗಳಿಗೆ ಬಡ್ತಿಕೊಡುವ ಕಾಲದಲ್ಲಿಯೂ ಹಿಂದುಳಿದ ವರ್ಗ ಮತ್ತು ಅನುಸೂಚಿತ ಜಾತಿಗಳವರ ವಿಚಾರದಲ್ಲಿ ಸ್ಥಾನ ಮೀಸಲಿಡತಕ್ಕ ನೀತಿಯನ್ನು ಅನುಸರಿಸಬೇಕು ಎಂಬ ಉಚ್ಚತಮ ನ್ಯಾಯಾಲಯದವರ ನಿರ್ಣಯವನ್ನು ಕಾರ್ಯಗತಗೊಳಿಸಲು ಸರ್ಕಾರದವರು ತಕ್ಷಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು.....

ಸುಪ್ರೀಂ ಕೋರ್ಟಿನ ತೀರ್ಮಾನದ ಮೇಲೆ ಬಂದಿರತಕ್ಕ ನಿರ್ಣಯವಾದುದರಿಂದ ಮಾನ್ಯ ಸದಸ್ಯರು ಹೇಳುತ್ತಿರುವ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಇದರಲ್ಲಿ ಸೇರಿಲ್ಲವೆಂದು ಹೇಳಬೇಕಾಗಿದೆ.

ಆದರಿಂದ ಮಾನ್ಯ ಸದಸ್ಯರು ಈಗ ಏನು ಹರಿಜನರ ಬಗ್ಗೆ ಹೇಳುತ್ತಿದ್ದಾರೋ, ಅವರ ಬಗ್ಗೆ ಮಾತನಾಡುತ್ತಿದ್ದಾರೋ ಅದು ಈ ನಿರ್ಣಯದಲ್ಲಿ ಸೇರಿಲ್ಲ...

[Mr. DEPUTY SPEAKER in the Chair.]

ಶ್ರೀ ಎ. ಕೃಷ್ಣಶೆಟ್ಟಿ.—ಹಾಗಾದರೆ ನಾವು ಇತರ ವಿಚಾರಗಳನ್ನೂ ಮಾತನಾಡಿದರೆ, ಇವರ ಕೈಳಿಕೆಗೆ ತೊಂದರೆ ಬರುವ ಹಾಗೆ ಆಗುತ್ತದೆ ಎಂದು ಅವರ ಅಭಿಪ್ರಾಯವಿರುವಂತೆ ಕಾಣುತ್ತದೆ.

ನಾನು ಏಕೆ ಇವನ್ನೆಲ್ಲ ಹೇಳುತ್ತಿದ್ದೇನೆಂದರೆ ಈಗ ಮಜೂರರು, ಹರಿಜನರು ಬಹಳ ದಾರುಣ ಸ್ಥಿತಿಯಲ್ಲಿದ್ದಾರೆ. ಅವರ ಅಭಿವೃದ್ಧಿಯಾಗಬೇಕು. ಅವರ ಅಸ್ಪೃಶ್ಯತೆ ಹೋಗಬೇಕು. ಸಮಾಜದಲ್ಲಿ ಸಮಾನತ್ವದಿಂದ ಉಳಿಯಬೇಕು. ಅವರಿಗೆ ಸವಲತ್ತುಗಳೆಲ್ಲ ಇನ್ನೂ ಕೂಡ ಸರಿಯಾಗಿ ಸಿಕ್ಕಿಲ್ಲ. ಅವರೂ ಮುಂದೆ ಬರುವಂತೆ ಸಮಾಜದಲ್ಲಿ ಅವಕಾಶವನ್ನು ಮಾಡಿಕೊಡಬೇಕು. ಇಡೀ ಸಮಾಜದಲ್ಲಿ ಅವರೂ ಸೇರಿ, ಒಂದು ಹೊಸ ಸಮಾಜವನ್ನು ರಾಷ್ಟ್ರದಲ್ಲಿ ಸೃಷ್ಟಿಮಾಡಬೇಕು. ಅದಕ್ಕೆ ಸರಿಯಾದ ಪಾಲು ಕೊಡಬೇಕು. ಹಾಗೆ ಪಾಲುಕೊಟ್ಟು ಸರ್ಕಾರಿ ನೌಕರಿ ಮಟ್ಟಿಗೆ ಮಾತ್ರ ಮಾಡದಂತೆ ಬಾಕಿ ಕೆಲಸಗಳೂ ಬಹಳ ಇವೆ, ಇತರ ಕೆಲಸಗಳೂ ಇವೆ. ಈ ಎರಡನ್ನೂ ನೋಡಿ ಹರಿಜನರ ಅಭಿವೃದ್ಧಿ ಹಿಂದುಳಿದ Scheduled Caste ಮತ್ತು ಇನ್ನೂ ಹಿಂದುಳಿದ Scheduled Tribes ಇವುಗಳೆಲ್ಲ ಆಗಿರುವ ಅನ್ಯಾಯವನ್ನೂ ಸರಿಪಡಿಸುವ ರೀತಿಯಲ್ಲಿ, ತರಾವಿನಲ್ಲಿ ಹೇಳಿರುವ ಸರ್ಕಾರಿ ಕೆಲಸದ ಮಟ್ಟಿಗಲ್ಲ, ಬೇರೆ ಕೆಲಸಗಳೂ ಇದರಲ್ಲಿ ಅಂತರ್ಗತವಾಗಿದೆ ಎಂದು ತಿಳಿದುಕೊಂಡು, ಇದನ್ನು ಸರ್ಕಾರ ಒಪ್ಪಿಕೊಂಡು ಅದರಲ್ಲಿರುವ ತತ್ವವನ್ನು ತೆಗೆದುಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಬಿ. ಎರ್. ಸುಬ್ಬಮ್ಮ (ಚಿಕ್ಕಮಗಳೂರು). ಮಾನ್ಯ ಸಭಾಧ್ಯಕ್ಷರೇ, ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮಾನ್ ಸರ್ವೇಶ್ ಅವರು ಸಭೆಯ ಮುಂದೆ ಇಟ್ಟಿರುವ ನಿರ್ಣಯದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕೆಂದು ಅಪೇಕ್ಷೆಪಡುತ್ತೇನೆ. ಈ ನಿರ್ಣಯದ ವಿಷಯದಲ್ಲಿ ಮಾತೆ ನಾಡುವಾಗ ನಮ್ಮ ಕೆಲವು ಸ್ನೇಹಿತರು ಈ ನಿರ್ಣಯದಲ್ಲಿ ಕೇಳಿರುವಂತೆ ಸರ್ಕಾರದ ಹುದ್ದೆಗಳಿಗೆ ನೇಮಕಮಾಡುವ ಕಾಲದಲ್ಲಿ ಮತ್ತು ಬಡ್ತಿಕೊಡುವ ಕಾಲದಲ್ಲಿ ಕೆಲವು ಹುದ್ದೆಗಳನ್ನೂ ಮೀಸಲಿಡುವ ವಿಚಾರದಲ್ಲಿ ನ್ಯಾಯಾಲಯದ ತೀರ್ಮಾನವನ್ನು ಕಾರ್ಯಗತ ಮಾಡಬೇಕೆಂದು ಹೇಳಿದ್ದಾರೆ. ಈ ನಿರ್ಣಯದಲ್ಲಿ ಮೂಲಭೂತವಾಗಿರತಕ್ಕ ವಿಷಯ ಹರಿಜನರಿಗೆ ಎಲ್ಲ ವಿಧವಾದ ಉತ್ತೇಜನವನ್ನೂ ಕೊಡಬೇಕೆಂಬುದು ನಾನು ತಿಳಿದುಕೊಂಡಿದ್ದೇನೆ. ಈಗ ನಾನು ಹರಿಜನರು ಎಂದು ಸಂಬೋಧಿಸಿದರೆ ಯಾರು ದೇಶದಲ್ಲಿ ಅನಕ್ಷರಸ್ಥರಾಗಿದ್ದಾರೋ ಯಾರಿಗೆ ಜೀವನ ಮಾರ್ಗವನ್ನು ನಡೆಸಿಕೊಂಡು ಬರುವುದೇ ಕಷ್ಟವಾಗಿದೆಯೋ, ಸಮಾಜದಲ್ಲಿ ಇತರ ಮನುಷ್ಯರಂತೆ ಬಾಳುವುದೇ ಕಷ್ಟವಾಗಿದೆಯೋ ಅಂಥಾ ಜನಗಳನ್ನೆಲ್ಲ ಹರಿಜನರು ಎಂದು ಸಂಬೋಧಿಸಿ ಮಾತನಾಡುತ್ತೇನೆ.

ದೇಶಕ್ಕೆ ಸ್ವಾತಂತ್ರ್ಯವನ್ನು ಹೊಂದುವ ಮೊದಲು ರಾಷ್ಟ್ರ ಪಿತಾಮಹ ಮಹಾತ್ಮ ಗಾಂಧೀಜಿಯವರೂ, ದೇಶದ ಅನೇಕಾನೇಕ ನಾಯಕರುಗಳೂ ಈ ದೇಶದಲ್ಲಿ ಬಹುಸಂಖ್ಯಾತರಾಗಿರುವ ಜನಗಳ ಅಭಿವೃದ್ಧಿಯಾಗದ ಹೊರತು ಅದರಿಂದ ನಿಜವಾದ ಸ್ವಾತಂತ್ರ್ಯ ಸಾಧನೆಯಾಗಲಾರದು ಸ್ವಾತಂತ್ರ್ಯಕ್ಕೆ ಅಷ್ಟು ಯಶಸ್ಸು ಆಗಲಾರದು ಎನ್ನುವ ದೃಷ್ಟಿಯಿಂದ ಹರಿಜನರ ಅಭಿವೃದ್ಧಿಗಾಗಿ ಬಹಳವಾಗಿ ಸತತ ಪ್ರಯತ್ನಪಟ್ಟರು. ಅದರ ಫಲವಾಗಿ ಈ ದಿವಸ ಹಿಂದುಳಿದ ಜನಗಳ ಅಭಿವೃದ್ಧಿಯನ್ನೂ ಮಾಡತಕ್ಕ ದೃಷ್ಟಿಯನ್ನಿಟ್ಟುಕೊಂಡು ಸರ್ಕಾರ ಅಧಿಕಾರ ನಡೆಸಿಕೊಂಡು ಬರುತ್ತಿದೆ.

ಹರಿಜನರಿಗೆ ಮತ್ತು ಹಿಂದುಳಿದಿರತಕ್ಕವರಿಗೆ ವಿದ್ಯಾಭ್ಯಾಸದಲ್ಲಿ ಮತ್ತು ಸರ್ಕಾರಿ ಹುದ್ದೆಗಳಲ್ಲಿ ಕೆಲವು ನಿಯೋಜಿತ ಸ್ಥಾನಗಳನ್ನು ಮೀಸಲಾಗಿಟ್ಟುಕೊಂಡು ಬರುತ್ತಿದೆ. ಆದರೆ ಪ್ರಮೋಷನ್ ಕೊಡತಕ್ಕ ಕಾಲದಲ್ಲಿ ಕೂಡ ಅದನ್ನು ಜಾರಿಗೆ ತರಬೇಕೆಂದು ಮಾನ್ಯ ಸದಸ್ಯರು ತಮ್ಮ ನಿರ್ಣಯದಲ್ಲಿ ಅಳವಡಿಸಿದ್ದಾರೆ. ಇದು ನಾವು ಬಹಳವಾಗಿ ಯೋಚನೆಮಾಡತಕ್ಕ ವಿಷಯವಾಗಿದೆ. ಹರಿಜನರ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕು ಎನ್ನುವಾಗ ಅವರಿಗೆ ಎಷ್ಟು ಸ್ಥಾನಗಳನ್ನು ಕೆಲಸಕ್ಕೆ ನೇಮಕ ಮಾಡುವಾಗ ಮೀಸಲಾಗಿಟ್ಟಿದ್ದಾರೆಯೋ ಹಾಗೆಯೇ ಬಡ್ತಿಕೊಡುವಾಗಲೂ ಮೀಸಲಿಡಬೇಕು ಎನ್ನುವುದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಶ್ರೀಮಾನ್ ರಾಮಚಂದ್ರರಾಯರ Economy and Resources Committee Report ಪ್ರಕಾರ ಒಬ್ಬ ಅಧಿಕಾರಿಗೆ ಒಂದು ಜಿಲ್ಲೆಯ ಚಾರ್ಜ್ ಕೊಡಬೇಕಾದರೆ ಅವನಿಗೆ ಸುಮಾರು ಹತ್ತು ವರ್ಷ ಸರ್ವಿಸಾಗಿರಬೇಕು, ನಾನಾ ಇಲಾಖೆಗಳಲ್ಲಿ ಕೆಲಸಮಾಡಿ ಅನುಭವ ಹೊಂದಿರಬೇಕು. ಆಂಧ್ರದವರಿಗೆ ಮಾತ್ರ ಜಿಲ್ಲೆಯ ಜವಾಬ್ದಾರಿಯುತವಾದ ಹುದ್ದೆಗಳನ್ನು ಕೊಟ್ಟರೆ ಯಶಸ್ವಿಯಾಗಿ ಆಡಳಿತ ನಡೆಸಿಕೊಂಡು ಬರುತ್ತಾರೆ ಎಂಬುದಾಗಿ ಸೂಚಿಸಿದ್ದಾರೆ. ಮಾನ್ಯ ಸದಸ್ಯರು ತಿಳಿದಿರುವ ಹಾಗೆ ಅದು ಸ್ವಲ್ಪಮಟ್ಟಿಗೆ ನಿಜ. ಹತ್ತಾರು ವರ್ಷ ನಾನಾ ಇಲಾಖೆಗಳಲ್ಲಿ ಕೆಲಸಮಾಡಿ ಅನುಭವವನ್ನು ಹೊಂದಿರತಕ್ಕ ಅಧಿಕಾರಿಗಳು ಆಡಳಿತವನ್ನೂ ನಡೆಸಿಕೊಂಡು ಬರುವುದನ್ನೂ ಈ ವರ್ಷದೇ ಕೆಲಸಕ್ಕೆ ಸೇರಿದವರಿಗೆ ಅಧಿಕಾರವನ್ನು ಕೊಟ್ಟು ಒಂದು ಜಿಲ್ಲೆಯ ಚಾರ್ಜನ್ನು ಕೊಟ್ಟರೆ ಅವರು ಆಡಳಿತ ನಡೆಸಿಕೊಂಡು ಬರುವುದನ್ನೂ ನೋಡಿದರೆ ಅವೆರಡರಲ್ಲಿರುವ ವ್ಯತ್ಯಾಸ ನಮಗೆ ಅರ್ಥವಾಗುತ್ತದೆ. ಜನರಲ್ಲಿ ಅಪಾರವಾದ ಜ್ಞಾನ, ತಿಳುವಳಿಕೆ ಇದೆಯೇ ರಾಜ್ಯಾಂಗಬದ್ಧವಾದ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಎಷ್ಟರಮಟ್ಟಿಗೆ ತಿಳಿದುಕೊಂಡಿರುತ್ತಾರೆನ್ನುವುದನ್ನು ನಾವು ಯೋಚನೆ ಮಾಡಬೇಕು. ನಿಜವಾಗಿ ಹರಿಜನರ ಅಭಿವೃದ್ಧಿಯಾಗಬೇಕಾದರೆ ಅವರು ಬುದ್ಧಿವಂತರಾಗಿ ಎಲ್ಲ ವಿಷಯಗಳನ್ನು ತಿಳಿದುಕೊಂಡಿರತಕ್ಕ ಅಧಿಕಾರಿಗಳಾದರೆ ಸಾಕು. ಅವರಿಗೆ ಹರಿಜನ ಅಥವಾ ಹರಿಜನೇತರ ಎಂಬ ಭೇದಭಾವನೆಯಿಲ್ಲ. ಶ್ರೀಮಾನ್ ಬರ್ಜೆ ಅವರು ದೇಶದ ಮುಖ್ಯಮಂತ್ರಿ ಹರಿಜನನಾಗಬೇಕು ಎಂದು ಹೇಳಿದರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ಹರಿಜನ, ಸ್ತ್ರೀ ಅಥವಾ ಬ್ರಾಹ್ಮಣ, ಒಕ್ಕಲಿಗ, ಲಿಂಗಾಯಿತ ಎನ್ನುತಕ್ಕ ದೃಷ್ಟಿಯಿಂದ ನಾಯಕನನ್ನು ಆರಿಸಬಾರದು. ಯಾರೇ ಆಗಲೀ ಜನರ ಮೇಲೆ ಇಟ್ಟಿರತಕ್ಕ ಅಭಿಮಾನ, ದೇಶದ ಮೇಲೆ ಇರುವ ಅಭಿಮಾನ ಇವು ನಾಯಕನಾಗಿರುವುದಕ್ಕೆ ಮುಖ್ಯವಾಗಿರುತ್ತವೆ. ಈ ದೃಷ್ಟಿಯಿಂದ ನಾಯಕನನ್ನು ಆರಿಸಬೇಕೇ ಹೊರತು ಜಾತಿಯ ದೃಷ್ಟಿಯಿಂದಲ್ಲ. ದೇಶದಲ್ಲಿ ಯಾರು ಆ ಸ್ಥಾನಕ್ಕೆ ಅರ್ಹರು ಎನ್ನುವುದು ಮುಖ್ಯವಾದ ವಿಷಯವಾಗಿದೆ.

11-30 A.M.

ಸ್ಪೀಕರ್ ಶ್ರೀಮತಿ ನಾಗರತ್ನಮ್ಮನವರು ಕೆಲವು ಪ್ರಶ್ನೆಗಳನ್ನು ಕೇಳಿದ್ದರು. ಶ್ರೀಮಾನ್ ರಂಗನಾಥರವರು ಮಾತನಾಡುತ್ತಾ ಹಿಂದುಳಿದವರು ಯಾರು ಎಂಬ ಬಗ್ಗೆ ಬಹಳ ಸ್ವಾರಸ್ಯವಾಗಿ

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಮಾತನಾಡಿದರು. ಹರಿಜನರು ಯಾರು ಹಿಂದುಳಿದವರು ಯಾರು ಎಂಬುದಕ್ಕೆ ಎಲ್ಲ ಲಕ್ಷಣ ವಿವರಿಸಿದರು. ಇನ್ನೂ ಮಾಡಬೇಕಾಗಿರತಕ್ಕಂಥ ಕಾರ್ಯಗಳ ಬಗ್ಗೆ ಪ್ರಸ್ತಾಪಮಾಡಿದ್ದಾರೆ ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ಕೂಡ ಇನ್ನೂ ಪರೆಗೆ ಕುಡಿಯುವ ನೀರಿನ ಬಾವಿ, ವಾಸಕ್ಕೆ ಮನೆ ಮುಂತಾದವುಗಳನ್ನು ಒದಗಿಸಲು ಆಗಿಲ್ಲ. ಹರಿಜನರಿಗೆ ವಾಸಕ್ಕೆ ಸ್ಥಳ ಪ್ರತ್ಯೇಕವಾಗಿ ಕೊಟ್ಟರೆ ಅದೊಂದು ಸಣ್ಣ ಪಾಕಿಸ್ತಾನ ನಿರ್ಮಾಣಮಾಡಿದ ಹಾಗೆ ಆಗಿ ಅದರಿಂದ ಎಷ್ಟು ದುಷ್ಪರಿಣಾಮವಾಗುತ್ತದೆ ಎಂಬುದನ್ನು ಸರಕಾರ ದಯವಿಟ್ಟು ಯೋಚನೆ ಮಾಡಬೇಕು. ಹರಿಜನರು ನಮ್ಮ ದೇಶದ ಜನರು ಅಲ್ಲವೇ? ಎಲ್ಲ ಜನರೂ ಸೇದುವ ಬಾವಿಯಿಂದ ಹರಿಜನರೂ ನೀರು ಸೇದಿದರೆ ಏನಾಗುತ್ತದೆ? ಅವರಿಗೆ ಪ್ರತ್ಯೇಕವಾಗಿ ಬಾವಿ ಕೊಟ್ಟು ಅವರು ಹರಿಜನರು ಎಂಬ ಭಾವನೆ ಉಂಟು ಮಾಡುವುದಕ್ಕೆ ನಾವೇ ಕಾರಣರು. ಪ್ರತ್ಯೇಕವಾಗಿ ಹಾಸ್ಟೆಲ್ ಕೊಡುವುದೂ ಸಹ ಒಳ್ಳೆಯದಲ್ಲ. ಬ್ರಾಹ್ಮಣರ ಹಾಸ್ಟೆಲ್ಲನಲ್ಲಿ ಅವರು ಇದ್ದರೆ ಏನಾಗುತ್ತದೆ? ಬುದ್ಧಿವಂತರಾದವರಿಗೆ ಹೆಚ್ಚು ಪ್ರೋತ್ಸಾಹ ಕೊಡುತಕ್ಕದು ಅಗತ್ಯ. ನಾವು ಎಲ್ಲರೂ ಒಂದು, ನಾವೆಲ್ಲರೂ ಭಾರತಮಾತೆಯ ಮಕ್ಕಳು ಎಂಬ ಭಾವನೆ ಉಂಟ ಮಾಡಬೇಕು. ಲಿಂಗಾಯತರ ಹಾಸ್ಟೆಲ್, ಮುಸಲ್ಮಾನರ ಹಾಸ್ಟೆಲ್, ಒಕ್ಕಲಿಗರ ಹಾಸ್ಟೆಲ್ ಹೀಗೆ ಬೇರೆ ಬೇರೆ ಮಾಡಿ, ಮನಸ್ಸು ಒಡೆದು ಹೋಗುವ ಹಾಗೆ ಮಾಡುವುದನ್ನು ಪ್ರೋತ್ಸಾಹ ಕೊಡುವುದನ್ನೂ ಕೂಡಲೇ ನಾವು ನಿಲ್ಲಿಸಬೇಕೆಂದು ನಾನು ಈ ನಿರ್ಣಯದ ಸಂಬಂಧದಲ್ಲಿ ಮಾತನಾಡುತ್ತಾ ಹೇಳುತ್ತೇನೆ ಹಿಂದುಳಿದ ಜನಾಂಗದವರಲ್ಲಿಯೂ ಕೂಡ ಜಾತಿ ಜಾತಿಗಳ ಹಾಸ್ಟೆಲ್ ಇವೆ. ಕಡೂರಿನಲ್ಲಿ ಒಂದು ಹಿಂದುಳಿದ ಜನಾಂಗದ ಹಾಸ್ಟೆಲಿದೆ. ಈ ಹಾಸ್ಟೆಲ್ ಲೆಕ್ಕಪತ್ರ ಬಹು ಅಭಿಮಾನದಿಂದ ವಿಠಲಾಚಾರ್ಯ ಎಂಬುವರು ಚೆಕ್ ಮಾಡುತ್ತಿದ್ದರು. ಇತ್ತೀಚೆಗೆ ಅವರು ಅಲ್ಲ ಇಲ್ಲ ಈಗ ಅಲ್ಲಿಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತಿಲ್ಲ. ಜನರ ಮನಸ್ಸು ಒಡೆದು ಹೋಗಿದೆ. ಆದುದರಿಂದ ಇಂಥ ಹಾಸ್ಟೆಲ್ಲುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬಾರದು ಈ ನಿರ್ಣಯದಲ್ಲಿ ಪ್ರಮೋಷನ್ ಹರಿಜನರಿಗೆ ಹಿಂದುಳಿದವರಿಗೆ ಕೊಡಬೇಕೆಂದು ಇಷ್ಟೇ ಹೇಳಿದ್ದಾರೆ. ಆದರೆ ಮೊದಲು ಹಿಂದುಳಿದವರಿಗೆ ವಿದ್ಯಾಭ್ಯಾಸದ ಸೌಕರ್ಯ ಒದಗಿಸಿ ಕೊಡಬೇಕು, ವ್ಯವಸಾಯಕ್ಕೆ ಜಮೀನು ಕೊಟ್ಟು ಅವರ ಯೋಗಕ್ಷೇಮ ನೋಡಿಕೊಂಡು ಉದ್ಯೋಗ ಕೊಟ್ಟ ಮೇಲೆ ಪ್ರಮೋಷನ್ ಆ ಮೇಲೆ ಕೊಡಿ. ಹಿಂದುಳಿದ ವರಲ್ಲಿ ಒಬ್ಬನು ಡೆಪ್ಯುಟಿ ಕಮಿಷನರ್ ಆಗಿ ನೇಮಕವಾದರೆ ಎಲ್ಲಾ ಉದ್ಧಾರವಾಗುತ್ತದೆಯೇ? ಮೊದಲು ಅವರಿಗೆ ಜಮೀನು ಕೊಡಿ, ಉತ್ತಮ ರೀತಿಯಲ್ಲಿ ಸಂಸ್ಕಾರ ನಡೆಸಿಕೊಂಡು ಬರಲು ಎಂದು ನಾನು ಸಲಹೆ ಮಾಡುತ್ತೇನೆ. ಹರಿಜನರ ಅಭಿವೃದ್ಧಿಗಾಗಿ ಹಣ ಖರ್ಚು ಮಾಡುತ್ತಿದ್ದೇವೆ. ಪೂರ್ವದಲ್ಲಿ ಮಹಾರಾಜರು ರಾಜ್ಯಭಾರ ಮಾಡುತ್ತಿರುವಾಗ ಎಷ್ಟು ಜನ ಹರಿಜನ ಡೆಪ್ಯುಟಿ ಕಮಿಷರು ಆಗಿದ್ದರು? ಎಷ್ಟು ಜನ ಮಾನ್ಯ ಸಭೆಯ ಸದಸ್ಯರಾಗಿದ್ದರು? ನಮ್ಮ ಮೈಸೂರು ಸಂಸ್ಥಾನದಲ್ಲಿ ಶ್ರೀಮನ್ಮಹಾರಾಜರ ಕಾಲದಲ್ಲಿ ಹರಿಜನರ ವಿಷಯವಾಗಿ ಬಹಳ ಪ್ರೋತ್ಸಾಹ ಕೊಟ್ಟಿದ್ದಾರೆ. ಹಿಂದುಳಿದವರ ಮಕ್ಕಳು ವಿದ್ಯಾವಂತರಾಗಿ ಸಮಾಜದಲ್ಲಿ ಗಣ್ಯ ಸ್ಥಾನಹೊಂದಬೇಕು ಎಂದು ಮಾನ್ಯ ಸದಸ್ಯರು ಏನು ಸಲಹೆ ಮಾಡಿದ್ದಾರೆಯೋ ಅದನ್ನು ಎಲ್ಲರೂ ಒಪ್ಪುತ್ತಾರೆ. ಇವರಿಗಾಗಿ ಇದು ಸರಕಾರ ಇಷ್ಟು ಹಣ ಖರ್ಚು ಮಾಡುತ್ತಿದ್ದರೂ ಕೂಡ ಹಳ್ಳಿಗಳಲ್ಲಿ ಹೇಗೆ ನೋಡಿದರೆ ಹರಿಜನರು ಉತ್ತಮ ರೈತರು ಆಗಿದ್ದಾರೆಯೇ? ಕೆಲವರು ಮಾತ್ರ ಮುಂದೆ ಬಂದಿದ್ದಾರೆ. ಹರಿಜನರು ಯಾರು ಮುಂದೆ ಬಂದಿದ್ದಾರೆ? ಗ್ರ್ಯಾಂಟ್ ಕೊಡುವ ವ್ಯವಸ್ಥೆ ಇಟ್ಟಿದ್ದೀರಿ. ಹರಿಜನರ ಉದ್ಧಾರಕ್ಕಾಗಿ ಇಟ್ಟಿರುವ ಹಣವನ್ನು ಅವರು ಅಪಹರಿಸಿ ಮೋಸ ಮಾಡುತ್ತಿದ್ದಾರೆ. ಇದನ್ನು ಸಚಿವರ ಎದುರಿಗೆ ಹೇಳಲು ನಾನು ಸಿದ್ಧಳಿದ್ದೇನೆ. ಚಿಕ್ಕಮಗಳೂರಿನಲ್ಲಿ ಹರಿಜನರಿಗೆ ಸೌಲಭ್ಯವಿರುವ ಎರಡು ಹಾಸ್ಟೆಲ್ಲುಗಳು ಇವೆ. ಚಿಕ್ಕಮಗಳೂರಿನಲ್ಲಿ ಎಷ್ಟೋ ಜನ ಮದ್ರಾಸಿನಿಂದ ಬಂದಿರತಕ್ಕ ಕೂಲಿಕಾರರು ಕೆಲಸ ಮಾಡುತ್ತಾರೆ. ಅವರ ಎಂಡು ಹುಡುಗರನ್ನು ಹಾಸ್ಟೆಲ್ಲಿಗೆ ಸೇರಿಸಲು ಡೆಪ್ಯುಟಿ ಕಮಿಷನರಿಗೆ ಬೇಟಿಮಾಡಿ ಅವಕಾಶ ಮಾಡಿಕೊಡಬೇಕಾಯಿತು. ಇಂಥ ಕಠಿಣ ಪರಿಸ್ಥಿತಿ ಇದೆ. ಹರಿಜನರಲ್ಲಿಯೇ 24 ಪಂಗಡಗಳು ಇವೆ. ಒಂದು ಪಂಗಡದವರು ಇನ್ನೊಂದು ಪಂಗಡದವರಿಗೆ ಸಹಾಯ ಮಾಡುವುದಿಲ್ಲ. ಇದು ಸರಿಯಲ್ಲ. ಅಧಿಕಾರದಲ್ಲಿರತಕ್ಕಂಥವರ ಮನಸ್ಸು ವಿಶಾಲವಾಗಿರಬೇಕು. ದುಃಖಿಗಳ ಕಡೆ ಕರುಣಾ ಪೂರಿತ ಹೃದಯವಿರಬೇಕು. ಬೇರೆ ಜಾತಿಯವರು ಅತ್ಯಕ್ಕೆ ಅಂಜಿ ಸರಿಯಾಗಿ ಕೆಲಸ ಮಾಡುತ್ತಾರೆ. ಆದರೆ ತನ್ನ ಜಾತಿಯವರಿಂದಲೇ ಅನಾಹುತ ನಡೆದರೆ ಏನೂ ಮಾತನಾಡುವುದಿಲ್ಲ. ಹಿಂದುಳಿದವರ ಯೋಗಕ್ಷೇಮಕ್ಕಾಗಿ ಸುಸಂಸ್ಕೃತರಾದವರು ಪ್ರಯತ್ನಪಡುತ್ತಾರೆ. ಹಿಂದುಳಿದವರು ಮುಂದಕ್ಕೆ ಬರಬೇಕೆಂಬ ಮನೋಭಾವ ಅಂಥ ಅಧಿಕಾರಿಗಳಲ್ಲಿ ಇರುತ್ತದೆ. ಇಂಥ ಅಧಿಕಾರ ಸ್ಥಾನಗಳನ್ನು ಹರಿಜನರಿಗೆ ಕೊಡಬಾರದು ಎಂದು ಅಲ್ಲ. ಹರಿಜನರ ಅಭಿವೃದ್ಧಿಗಾಗಿ ಹರಿಜನರೇ

ಇರಬೇಕೆಂದು ಹೇಳತಕ್ಕಂಥಾದ್ದು ನ್ಯಾಯವಾದುದಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಈ ದಿವಸ ಈ ನಿರ್ಣಯಕ್ಕೆಎಲ್ಲರ ಪೂರ್ಣ ಬೆಂಬಲವಿದೆ. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಹರಿಜನರ ವಿಷಯದಲ್ಲಿ ರಚನಾತ್ಮಕ ಕೆಲಸ ಮಾಡಿದ್ದಾರೆ ಹರಿಜನರು ಬೇರೆ ಅಲ್ಲ, ನಾವು ಬೇರೆ ಅಲ್ಲ, ಎಂಬ ಅಭಿಪ್ರಾಯ ಇಂದು ನಮಗೆ ಇದೆ. ಕಷ್ಟದಲ್ಲರ ವವರನ್ನು ಸಮಾಧಾನ ಪಡಿಸಬೇಕಾದುದು ನಮ್ಮ ಕರ್ತವ್ಯ. ಈ ಹಿಂದುಳಿದ ಜನತೆಯ ಬಗ್ಗೆ ಪೂರ್ಣ ಸಹಾನುಭೂತಿ ಇದೆ. ಸರಿಯಾದ ರೀತಿಯಲ್ಲಿ ಸರಕಾರ ಸಹಾಯ ಮಾಡುತ್ತಿಲ್ಲ. ಹಣ ಖರ್ಚು ಮಾಡುತ್ತಿದ್ದರೂ ಕೂಡ ನಿರೀಕ್ಷಿಸಿದಷ್ಟು ಫಲತಾಂಶ ಕಂಡುಬರುವುದಿಲ್ಲ. ಈ ಜನರ ಸಂಕಟ ಏನಿದೆ ಎಂಬುದು ಪಪಜ ಕಲ್ಯಾಣ ಶಾಖೆಯನ್ನು ವಹಿಸಿಕೊಂಡಿರತಕ್ಕಂಥ ಸಚಿವೆಯವರಾದ ಶ್ರೀಮತಿ ಯಶೋದರ ದಾಸಪ್ಪ ಅವರಿಗೆ ಚೆನ್ನಾಗಿ ಗೊತ್ತಿದೆ. ಅವರ ಕುಟುಂಬ ವರ್ಗದವರೆಲ್ಲರೂ ಹರಿಜನರಿಗಾಗಿ ಆನೂಚಾನವಾಗಿ ಬಹಳ ತ್ಯಾಗ ಮಾಡಿ ಸೇವೆ ಸಲ್ಲಿಸಿದ್ದಾರೆ. ಉಚ್ಚ ನೀಚ ಎಂಬ ಭಾವನೆ ಇಲ್ಲದೆ ಕಳಮಟ್ಟದಲ್ಲಿರುವವರನ್ನು ಮೇಲ್ಮಟ್ಟಕ್ಕೆತರಲು ಬಹಳ ಶ್ರಮವಹಿಸಿ ದುಡಿದಿದ್ದಾರೆ. ಅವರ ನಿಸ್ವಾರ್ಥ ಸೇವೆಯ ಬಗ್ಗೆ ಮೈಸೂರಿನ ಜನಕ್ಕೆ ಗೊತ್ತಿದೆ. ಅಂಥವರ ಕೈಯಲ್ಲಿ ಇಂದು ಸಮಾಜ ಕಲ್ಯಾಣ ಶಾಖೆ ಇರುವುದರಿಂದ ತತ್ಪಕ್ಕೆ ಅನುಗುಣವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಯಾವ ಉದ್ದೇಶಕ್ಕಾಗಿ ಈ ಇಲಾಖೆ ನಿರ್ಮಾಣ ಮಾಡಲಾಗಿದೆಯೋ ಆ ಉದ್ದೇಶ ಈಡೇರುವುದಕ್ಕಾಗಿ ಹೆಚ್ಚು ಸೌಲಭ್ಯ ಹಣ ಒದಗಿಸಬೇಕು. ಈ ಕಾರ್ಯದಲ್ಲಿ ದೋಷ ದೋಷಗಳು ಬಾರದ ಹಾಗೆ ಕೆಲಸ ನಡೆಸಬೇಕು ಮತ್ತು ಈ ಉದ್ದೇಶಕ್ಕಾಗಿ ಬೇಕಾಗುವ ಹಣವನ್ನು ಸರಕಾರದಿಂದ ಪಡೆಯಬೇಕು ಎಂದು ಸಲಹೆ ಮಾಡುತ್ತೇನೆ. ಈ ನಿರ್ಣಯಕ್ಕೆ ನಾನು ಪೂರ್ಣ ಬೆಂಬಲ ಕೊಡುತ್ತೇನೆ.

† ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಸ್ಪಾಪಿ, ಮಾನ್ಯ ಸದಸ್ಯರಾದ ಶ್ರೀಮಾನ್ ಸರ್ವೇಶ್ವರಯ್ಯ ಮಾನ್ಯ ಸಭೆಯ ಮುಂದೆ ಮಂಡಿಸಿರುವ ಈ ನಿರ್ಣಯವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ ಮತ್ತು ಇದಕ್ಕೆ ನನ್ನ ಬೆಂಬಲ ಸೂಚಿಸುತ್ತೇನೆ. ಇದುವರೆಗೂ ಅನೇಕ ಮಾನ್ಯ ಸದಸ್ಯರು ಮಾತನಾಡಿ ಈ ನಮ್ಮ ದೇಶದಲ್ಲಿ ಇರುವ ಹಿಂದುಳಿದ ವರ್ಗಗಳು ಮತ್ತು ಅನುಸೂಚಿತ ಜಾತಿಗಳಿಗೆ ಸಾಕಾದಷ್ಟು ವ್ಯಾಪ್ತಿಯಲ್ಲಿ ಕೊಡಬೇಕು ಎನ್ನುವ ಅಭಿಪ್ರಾಯವನ್ನು ಎಲ್ಲರೂ ತಿಳಿಸಿದ್ದಾರೆ. ಇಲ್ಲಿ ನನಗೆ ಒಂದು ಮಾತು ನೆನಪಿಗೆ ಬರುತ್ತದೆ ಏನೆಂದರೆ ಡಾಕ್ಟರ್ ಅಂಬೇಡ್ಕರ್ ಅವರು ಕೊನೇ ಸಲ ಬೆಂಗಳೂರಿಗೆ ಭೇಟಿ ಕೊಟ್ಟಾಗ ಅವರು ಭಾಷಣ ಮಾಡುತ್ತಾ ಈ ದೇಶದ ಹಿಂದುಳಿದ ಜನ ಮತ್ತು ಹರಿಜನರಿಗೆ ಈ ಸ್ಥಾನಗಳನ್ನು ಕಾದಿಡುವ ಒಂದು ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬರುತ್ತಿರುವ ಕಾರಣದಿಂದಲೇ ಇವರು ಪ್ರತ್ಯೇಕವಾಗಿರುವುದನ್ನು ಮತ್ತು ಹಾಗೆಯೇ ಹಿಂದುಳಿದಿರುವುದನ್ನೂ ಹೀಗೆ ಮುಂದುವರಿಸಿಕೊಂಡು ಹೋಗುವುದಕ್ಕೆ ಅವಕಾಶವಾಯಿತೋ ಏನೋ ; ಆದ್ದರಿಂದ ಈ ಸ್ಥಾನಗಳನ್ನು ಕಾದಿರಿಸುವುದನ್ನು ತೆಗೆದು ಹಾಕುವುದು ಒಳ್ಳೆಯದೆಂದು ನನಗೆ ಕಾಣುತ್ತದೆ ಎಂದು ಹೇಳಿದ್ದು ಮಾತ್ರವಲ್ಲದೆ, ಅವರು ಈ ಹರಿಜನರ ಸಮಸ್ಯೆಗೆ ಒಂದು ಹೊಸರೂಪವನ್ನೂ ಕೂಡ ಕೊಟ್ಟರು. ಅದೇನೆಂದರೆ ಈ ದೇಶದಲ್ಲಿರತಕ್ಕ ಎಲ್ಲಾ ಹರಿಜನರು ಬೌದ್ಧಮತಕ್ಕೆ ಸೇರುವುದು ಒಳ್ಳೆಯದು ಎಂದು ಹೇಳಿದ್ದರು. ದಿವಂಗತ ಅಂಬೇಡ್ಕರ್‌ರವರು ನಮ್ಮ ದೇಶದಲ್ಲಿ ಹುಟ್ಟಿದಂಥ ಅನೇಕ ದೊಡ್ಡ ಮೇಧಾವಿಗಳಲ್ಲಿ ಒಬ್ಬರು. ಅವರನ್ನು 'ಆಧುನಿಕ ಮನು ಎಂದು ಕೂಡ ಕೆಲವರು ಕರೆದರು' ರಾಜ್ಯಾಂಗವನ್ನು ನಿರೂಪಿಸುವುದರಲ್ಲಿ ಅವರ ಪಾತ್ರ ಬಹಳ ದೊಡ್ಡದಾಗಿತ್ತು. ಆದರೆ ದುರಾದೃಷ್ಟದಿಂದ ಈ ದಿನ ಅವರು ನಮ್ಮ ಮಧ್ಯದಲ್ಲಿ ಇಲ್ಲ. ಈಗ ಹದಿನಾರು ವರ್ಷಗಳಿಂದ ಕಾಂಗ್ರೆಸ್ ತನ್ನ ಧೋರಣೆಯಲ್ಲಿ ಹಿಂದುಳಿದ ವರ್ಗಗಳಿಗೆ ಮತ್ತು ಅನುಸೂಚಿತ ಜಾತಿಗಳಿಗೆ ಹೆಚ್ಚಿನ ಅವಕಾಶವನ್ನು ಕಲ್ಪಿಸಿಕೊಡಬೇಕೆನ್ನುವ ದೃಷ್ಟಿಯಿಂದ ಕೆಲವು ಯೋಜನೆಗಳನ್ನು ಕಾರ್ಯಗತ ಮಾಡಿದೆ, ಮಾಡುತ್ತಾ ಇದೆ. ಆದರೆ ಮಾನ್ಯ ಸದಸ್ಯರು ಅನೇಕರು ಅನುಮಾನವನ್ನು ವ್ಯಕ್ತ ಪಡಿಸಿದಂತೆ ಈ ಸೌಲಭ್ಯಗಳು, ಖರ್ಚು ಮಾಡತಕ್ಕ ಹಣ, ಎಲ್ಲಾ ಹರಿಜನರಿಗೂ ಹಿಂದುಳಿದ ವರ್ಗದವರಿಗೂ ಎಲ್ಲಾ ಅನುಸೂಚಿತ ಜಾತಿಯವರಿಗೂ ದೊರೆಯುತ್ತಾ ಇಲ್ಲ, ಕೆಲವರಿಗೆ ಮಾತ್ರ ದೊರೆಯುತ್ತಾ ಇದೆ. ಅಲ್ಲಿ ದೋಷದೋಷಗಳು ಇವೆ ಎಂದು ಹೇಳಿದರು. ದೋಷದೋಷಗಳು ಇರುತ್ತವೆ. ಎಷ್ಟೋ ಸಲ ಹಣ ಖರ್ಚಾಗುತ್ತದೆ ಸದುಪಯೋಗವಾಗುವುದಿಲ್ಲ, ಅದಕ್ಕೆ ತಮ್ಮ ಮುಂದೆ ಕಾಫೀ ಬೋರ್ಡಿನ ವಿಷಯವೇ ಇದೆ. ಸರ್ಕಾರದಲ್ಲಿ ಹಣ ದುರುಪಯೋಗವಾಗದಂತೆ ನೋಡಿಕೊಂಡು ಹೋಗತಕ್ಕದು ಆ ಮಾತು ಎಲ್ಲಾ ಇಲಾಖೆಗಳಿಗೂ — ಪಿ.ಡಬ್ಲ್ಯೂ.ಡಿ.ಗೂ ಸಲ್ಲಬೇಕು, ಶರಾವತಿ ಪ್ರಾಜೆಕ್ಟಿಗೂ ಸಲ್ಲಬೇಕು ಎಲ್ಲಕ್ಕೂ ಆ ಮಾತು ಸಲ್ಲುತ್ತದೆ. ಸಾರ್ವಜನಿಕ ಹಣ ಎಂದಾಗ ಹೇಗೆ ವಿತರಣೆಯಾಗಬೇಕು, ಯಾವ ಉದ್ದೇಶಕ್ಕೆ ಮುಡುಪಾಗಿಡಲ್ಪಟ್ಟಿದೆಯೋ ಅದೇ ಉದ್ದೇಶಕ್ಕೆ ಅದು ಸಾರ್ಥಕವಾಗಬೇಕೆನ್ನುವ ಮಾತಿನಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರುವುದಕ್ಕೆ ಸಾಧ್ಯವಿಲ್ಲ. ದುರುಪಯೋಗವಾಗಿಲ್ಲ ಎಂದು ನಮರ್ಥಿಸುವುದು ಸರ್ಕಾರದ ಜವಾಬ್ದಾರಿ, ಅದನ್ನು ಇಲ್ಲ ಎಂದು ಹೇಳುತ್ತಿಲ್ಲ. ಹರಿಜನರಿಗೆ ಎಂಬುದಾಗಿ ಹಣ ಕೆಲವು ಜನರ ಕೈಯಲ್ಲಿ

(ಶ್ರೀ ಎಸ್. ಗೋಪಾಲ ಗೌಡ)

ಹೋಯಿತು ಅಥವಾ ವಿಶೇಷವಾಗಿ ಕಾದಿರಿಸಲ್ಪಟ್ಟ ಸ್ಥಾನಗಳು ಕೆಲವು ಜನರಿಗೆ ಮಾತ್ರ ಕೊಡಲ್ಪಟ್ಟು ಹರಿಜನರು — ಗಿರಿಜನರು ಮುಂದೆ ಬರುತ್ತಾ ಇದ್ದಾರೆ ಬೇರೆಯವರಿಗೆ ದೊರೆಯುತ್ತಿಲ್ಲ ಎನ್ನುವ ಕಾರಣಕ್ಕಾಗಿಯೇ ನಾವು ಈ ಒಂದು ಕಾದಿರಿಸಬೇಕೆನ್ನುವ ಅಭಿಪ್ರಾಯವನ್ನು ಗೌಣವಾಗಿ ಭಾವಿಸುವುದಾದರೆ, ಅದು ಅಷ್ಟು ಸರಿಯಲ್ಲ ಎಂದು ಹೇಳುವುದಾದರೆ ಅದಕ್ಕೆ ನನ್ನ ವಿರೋಧ ಇದೆ. ರಾಜ್ಯಾಂಗದ 16 (1) ರಲ್ಲಿ ಈ ರೀತಿ ಹೇಳಿದೆ :

> " There shall be equality of opportunity for all citizens in matters relating to employment or appointment to any office under the State "

ಹಿಂದುಳಿದ ವರ್ಗಗಳಿಗೆ ಕೆಲವು ಸ್ಥಾನಗಳನ್ನು ಕೆಲವು ಕಡೆಗಳಲ್ಲಿ ಕಾದಿರಿಸಬೇಕೆಂತಲೇ ಆದೇಶವಿದೆ. " equality of opportunity " ಸಮಾನ ಅವಕಾಶ ಎನ್ನುವುದೇ ಅದರ ವ್ಯಾಖ್ಯಾನ ಅಥವಾ ಭಾಷ್ಯವನ್ನು ಮಾಡುವುದಾದರೆ ಸಮಾನ ಅವಕಾಶ ಎಂದಾಗ ಎರಡು ಮಕ್ಕಳು ಒಂದೇ ಸನ್ನಿವೇಶದಲ್ಲಿ ಹುಟ್ಟಿ ಒಂದೇ ರೀತಿಯಲ್ಲಿ ಬೆಳೆದು ಒಂದೇ ರೀತಿಯ ಅವಕಾಶ ಕಡೆಯವರೆಗೂ ಬರುವಾಗ ಈ ಮಗುವಿಗೆ ಯಾವ ಅವಕಾಶವನ್ನು ಕೊಡುತ್ತಾನೆಯೋ ಇನ್ನೊಂದು ಮಗುವಿಗೂ ಅದೇ ಅವಕಾಶವನ್ನು ಕೊಡಬೇಕೆನ್ನುವ ಮಾತು ಅದು ಸಾರ್ಥಕವಾಗುತ್ತದೆ. ಬೆಂಗಳೂರಿನಲ್ಲಿ ಹುಟ್ಟುವ ಒಂದು ಮಗುವೂ ಹುಲಕಲ್‌ನಲ್ಲಿ ಹುಟ್ಟುವ ಮಗುವಿಗೆ ಸಮವಾಗುವುದಿಲ್ಲ. ವಿದ್ಯಾಭ್ಯಾಸದ ವಿಷಯದಲ್ಲಿ ಮತ್ತು ಇನ್ನೂ ಅನೇಕ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಐದು ಸಾವಿರ ವರ್ಷಗಳಿಂದ ಬೆಳೆದು ಬಂದಿರತಕ್ಕ ಪರಂಪರಾನುಗತವಾಗಿ ಬೆಳೆದು ಬಂದಿರತಕ್ಕ ನಮ್ಮ ಸಮಾಜದಲ್ಲಿ ಅನೇಕ ಉರುಪೇರುಗಳಿವೆ, ಅನೇಕರಿಗೆ ಅವಕಾಶಗಳೇ ಇಲ್ಲ, ಪುನ್ಕದಲ್ಲಿ ಅಥವಾ ರಾಜ್ಯಾಂಗದಲ್ಲಿ ಸಮಾನ ಅವಕಾಶವನ್ನು ನೀಡಬೇಕು ಎನ್ನುವ ಅಭಿಪ್ರಾಯ-ತತ್ವ-ಮಾನ್ಯ ಮಾಡಲ್ಪಟ್ಟಿದ್ದರೂ ಕೂಡ ವಾಸ್ತವ ಸ್ಥಿತಿಯಲ್ಲಿ ಇವತ್ತು ಯಾರ್ಯಾರು ಏಗೆ ಹೇಗೆ ಬೆಳೆಯುತ್ತಾ ಇದ್ದಾರೆ ಅವರ ಹುಟ್ಟಿನ ಸನ್ನಿವೇಶ ಏನು ಅವರನ್ನು ಮುಂದೆ ತರುವುದಕ್ಕೆ ಹೇಗೆ ಸಾಧ್ಯ ಎನ್ನುವ ಪ್ರಶ್ನೆಯನ್ನು ಯೋಚನೆ ಮಾಡುತ್ತಾ ಹೋದರೆ ನಾವು ಇವತ್ತು ನಮ್ಮ ಕಣ್ಣಿಗೆ ಕಾಣುತ್ತದೆ ನಮಗೆ ಪೂರ್ತಿ ಅರಿವು ಆಗುತ್ತದೆ. ಒಂದು ಮಗುವಿನಂತೆ ಇನ್ನೊಂದು ಮಗು ಇಲ್ಲ ಎಂದು. ಇವತ್ತು ಹರಿಜನರನ್ನು ಗಿರಿಜನರನ್ನು ಮತ್ತು ಇನ್ನೂ ಕೆಲವು ಹಿಂದುಳಿದ ಜನರನ್ನು ನೋಡಿದರೆ ಅವರ ಮೂಲ ಸಮಸ್ಯೆಯನ್ನು ಪರೀಲನೆ ಮಾಡಿದರೆ ಈ ಸಮಾಜ ಹುಟ್ಟಿದಾರಭ್ಯದಿಂದಲೂ ಅವರ ಮೇಲೆ ಕೆಲವು ನಿರ್ಬಂಧನಗಳನ್ನು ಹೊರಿಸಿರುವಾಗಿದೆ. ಹುಟ್ಟಿನಿಂದಲೇ ಕೀಳು ಎಂಬ ಲಾಂಛನ ಇವತ್ತೂ ಇದೆ. ಆಧುನಿಕ ದೃಷ್ಟಿಕೋನದಿಂದ ಇವತ್ತು ಯಾರೂ ಕೀಳಲ್ಲ ಎಂದು ಭಾವಿಸಿದರೂ ಕೂಡ ಸಮಾಜದಲ್ಲಿ ಆ ಭಾವನೆ ಮತ್ತು ಅಸ್ಪೃಶ್ಯತೆಯ ಭಾವನೆ ಈ ಸಮಾಜಕ್ಕೆ ಹತ್ತಿರತಕ್ಕ ಕಳಂಕ. ಮಹಾತ್ಮಾ ಗಾಂಧೀಜಿಯವರು ಈ ಸಮಾಜದಲ್ಲಿ ಜಾತೀಯತೆ ಮತ್ತು ಅಸ್ಪೃಶ್ಯತೆ ಈ ಸಮಾಜದ ಶರೀರಕ್ಕೆ ಹುಟ್ಟಿರತಕ್ಕ ಕುಷ್ಠ ಎಂದು ಹಿಂದೆ ಹೇಳುತ್ತಾ ಇದ್ದರು. ಇದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಇವತ್ತು ಸಮಾನ ಅವಕಾಶ ಎಂದು ಎಲ್ಲಾ ಮಕ್ಕಳು ಒಂದೇ ರೀತಿಯಲ್ಲಿವೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ನಾವು ಇವತ್ತು ಈ ಹಿಂದುಳಿದಿರತಕ್ಕ ಜನರಿಗೆ ಅವರು ಒಂದು ಸಮವಾದ ನೆಲೆಗಟ್ಟಿನ ಮೇಲೆ ಬರುವ ತನಕ, ಸಮಾನ ಅವಕಾಶ ಅವರಿಗೆಲ್ಲಾ ದೊರೆಯುವ ತನಕ, ದೀನ ಹಾಗೂ ದಲಿತ ಜನಾಂಗಕ್ಕೆ ವಿಶೇಷವಾದ ಅವಕಾಶವನ್ನು ಸರ್ಕಾರದವರು ಕೊಡಲೇ ಬೇಕಾಗುತ್ತದೆ — ಬೇರೆ ಏನೇನೋ ವಾದ ಮಾಡಿ ಸಮಾನ ಅವಕಾಶದ ಪ್ರಕರಣವನ್ನು ಹೊಡ್ಡದು ಮಾಡಿಹಣ ದುರುಪಯೋಗವಾಗುತ್ತಿದೆ ಎನ್ನುವ ಕಾರಣವನ್ನು ಮುಂದೊಡ್ಡಿ ಅವರು ಬೇರೆ ಎಲ್ಲರಿಗೂ ಸಮಾನರಾಗಿದ್ದಾರೆ ಎನ್ನುವ ವಾದವನ್ನು ಯಾರಾದರೂ ಸಮರ್ಥಿಸಿಕೊಳ್ಳುತ್ತಾ ಹೋಗುವುದಕ್ಕೆ ಅವಕಾಶ ಕೊಟ್ಟರೆ ಆಗ ಸಮಾಜದಲ್ಲಿರತಕ್ಕ ಉರುಪೇರು ಹಾಗೆಯೇ ಮುಂದುವರಿಯುತ್ತದೆ, ಈಗ ನಾವು ಯಾರನ್ನು ಮುಂದುವರಿದವರು, ಬಲಿಷ್ಠರು ಎಂದು ಕರೆಯುತ್ತೇವೆಯೋ ಅವರ ಜೊತೆಯಲ್ಲಿ ಯಾವ ಕ್ಷೇತ್ರದಲ್ಲೂ ಕೂಡ ಸ್ಪರ್ಧೆ ಮಾಡುವುದಕ್ಕೆ ಅವರಿಂದ ಆಗುವುದೇ ಇಲ್ಲ.

ಈ ಒಂದು ಕಾರಣದಿಂದ ನಾವು ಇವೊತ್ತು ಹೇಳಬಹುದು. ನಾನು ಈ ಒಂದು ವಾದವನ್ನು ಮಾಡುವುದೇನೋ ಒಳ್ಳೆಯದು, ಬಡವರು, ಹರಿಜನರು ಎನ್ನುವ ಮಾತು ಬಂದಕೂಡಲೇ ಹರಿಜನರಿಗಿಂತ ಹೀನಸ್ಥಿತಿಯಲ್ಲಿರತಕ್ಕವರು ನಮ್ಮಲ್ಲಿ ಎಷ್ಟು ಇಲ್ಲ. ನಮ್ಮ ರೈತರಲ್ಲಿ, ಅಥವಾ ಇನ್ನೊಬ್ಬರಲ್ಲಿ ಹರಿಜನರಿಗಿಂತ ಹೀನಸ್ಥಿತಿಯಲ್ಲಿರುವವರು ಇದ್ದೇ ಇದ್ದಾರೆ. ಎಷ್ಟೋ ದೊಡ್ಡ ಹುದ್ದೆಯಲ್ಲಿ ಒಬ್ಬ ಹರಿಜನರು ಇರಬಹುದು. ಕಷ್ಟಪಟ್ಟು ಯಾರೋ ಒಬ್ಬರು ಪಾರ್ಲಮೆಂಟಿಗೆ

ಮೆಂಬರಾಗಿಯೋ ಅಥವಾ ಒಬ್ಬರು ಪಬ್ಲಿಕ್ ಸರ್ವೆಂಟ್ಸ್ ಜೇಮ್ಟಿನ್ನರಾಗಿಯೋ ಅಥವಾ ಒಬ್ಬರು ಎಂ. ಎಲ್. ಎ. ಆಗಿಯೋ ಹರಿಜನರಾಗಿ ಹುಟ್ಟಿ ಕಷ್ಟಪಟ್ಟು ಓದಿ ಜನರ ಬೆಂಬಲವನ್ನು ಗಳಿಸಿ ಮುಂದೆ ಬಂದಿದ್ದಾರೆ ಎಂದ ಮಾತ್ರಕ್ಕೆ ಎಲ್ಲ ಹರಿಜನರೂ ಇದೇ ರೀತಿ ಮುಂದೆ ಬಂದಿದ್ದಾರೆ ಎಂದು ಭಾವಿಸುವುದಕ್ಕೆ ಆಗುವುದಿಲ್ಲ. ಈ ವಿಷಯವನ್ನು ನಾವು ಚರ್ಚೆ ಮಾಡುವಾಗ ಇದಕ್ಕೆ ಸರಕಾರ ಏನು ಪರಿಹಾರ ಸೂಚಿಸಬೇಕೆಂದು ಹೇಳುವಾಗ ವಿಶೇಷವಾದ ಗಮನವನ್ನು ಅವರಿಗೆ ಕೊಡಿಸುವಾಗ ಸಮಾಜದಲ್ಲಿ ಅವರಿಗಿಂತ ಪಾರ್ಶ್ವರಾಗಿರುವಂತಹವರಿಗೂ ಅವಕಾಶ ಕೊಡಬೇಕು. ಬೇರೆ ಜನರೂ, ಆರ್ಥಿಕವಾಗಿಯೂ ಹಿಂದುಳಿದಿದ್ದಾರೆ ಸಾಮಾಜಿಕವಾಗಿಯೂ ಹಿಂದುಳಿದಿದ್ದಾರೆ. ವಿದ್ಯಾ ಬುದ್ಧಿಗಳಿಲ್ಲದವರಾಗಿದ್ದಾರೆ. ಆದುದರಿಂದ ಈ ಜನಗಳಿಗೇ ವಿಶೇಷವಾದ ಸಹಾಯ ಕೊಡಬೇಕೆಂದೂ, ಸುವ್ಯವಸ್ಥಿತವಾಗಿ ಮಾಡಬೇಕೆನ್ನುವುದೂ ಸೂಚಿಸುವುದು ಸರಿಯಲ್ಲ. ನಿರ್ದಿಷ್ಟವಾದ ಉದಾಹರಣೆಯನ್ನೇ ಈಗಿರತಕ್ಕ ಸಾಮಾಜಿಕ ನಿಯಮವಿಶೇಷದಲ್ಲಿ ಕೊಡುತ್ತೇನೆ. ಒಬ್ಬ ಬ್ರಾಹ್ಮಣರ ಹುಡುಗ, ಒಬ್ಬ ಹರಿಜನರ ಹುಡುಗ ಆರ್ಥಿಕವಾಗಿ ಸ್ವಲ್ಪ ಒಳ್ಳೆಯ ಸ್ಥಿತಿಯಲ್ಲಿಲ್ಲ ಎಂದು ಇಟ್ಟುಕೊಳ್ಳೋಣ. ಆರ್ಥಿಕವಾಗಿ ಬಡವರಾಗಿದ್ದಾರೆ. ಇನ್ನೊಬ್ಬರು ಸಾಮಾಜಿಕವಾಗಿ ಹಿಂದುಳಿದಿವರು ಸಾಮಾಜಿಕ ದೃಷ್ಟಿಯಿಂದ ಹರಿಜನ ಎನ್ನತಕ್ಕ ಸಾಮಾಜಿಕ ಲಾಂಛನವಿದೆ. ಅವನನ್ನು ಹರಿಜನ ಎಂದ ನೋಡಿದೆ ಇರುವತನಕ ಇಲ್ಲ ಸಮಾನತೆ ಎಲ್ಲಿ ಬಂತು. ಅವರು ಸಹಪಂಕ್ತಿ ಭೋಜನ ಮಾಡಿಕೊಂಡು ಆರ್ಥಿಕವಾಗಿ ವ್ಯವಹಾರದಲ್ಲಿ ಬಂದುವರೆದು ನಾಳೆ ಅಂತರ್‌ಜಾತಿಯ ವಿವಾಹಗಳು ನಡದು ಅವರಲ್ಲಿ ಹುಟ್ಟಿರತಕ್ಕ ಮಕ್ಕಳು ಆ ಜಾತಿಯ ಕಳಂಕವನ್ನು ದೂರ ಮಾಡತಕ್ಕ ಮಕ್ಕಳಾಗಿ ಪರಿಣಮಿಸುವತನಕ, ಈ ವಿಶೇಷ ಅವಕಾಶ ಕೊಡಬೇಕಾಗಿದೆ. ಅಮೇರಿಕಾದಲ್ಲಿಯೇ ಅಲ್ಲ, ಪ್ರಪಂಚದಲ್ಲಿ ಇವೊತ್ತು ಬಣ್ಣದ ಜನಾಂಗದ ಕಲಹ ಎಂಬ ಕಪ್ಪು ಜನರ ಮೇಲೆ ಬಿಳಿ ಜನಾಂಗದ ಕಲಹಗಳು ಆಗಿ ಇಡೀ ಆಫ್ರೀಕಾ ದೇಶದಲ್ಲಿ ಅಲ್ಲಕಲ್ಲೋಲವಾಗುವಂತಹ ಪರಿಸ್ಥಿತಿಗಳು ಬಂದಿವೆ. ಈ ಬಣ್ಣ ವರ್ಗದ ಕಲಹಗಳೇ ಅಲ್ಲದೆ ನನ್ನ ಸ್ನೇಹಿತರೊಬ್ಬರು ಇಲ್ಲಿ ಹೇಳುತ್ತಾರೆ. ಗ್ರೀಕರ ಕಾಲದಲ್ಲೂ ಗುಲಾಮರನ್ನು ಮಾರುವುದು ಇದ್ದಿತು. ಆ ವರ್ತನೆಗಿಂತ ಹೀನವಾದುದೇನಿಲ್ಲ. ಹಾಗೆ ಹರಿಜನ ಎನ್ನುವ ಭಾವನೆ ಇದೆ. ಅದು ಬಹಳ ಆಳವಾದುದು. ಮನುಷ್ಯನ ಮನಸ್ಸು ಮತ್ತು ಹೃದಯ ಇವುಗಳನ್ನು ಈ ತ್ಯಣೀಕರಿಸಬಾಗದು. ಬಿ. ಎ. ಪಾಸುಮಾಡಿ, ಎಂ. ಪಿ. ಆಗಿರಬಹುದು, ಪಬ್ಲಿಕ್ ಸರ್ವೆಂಟ್ಸ್ ಜೇಮ್ಟಿನ್ನರಾಗಿರಬಹುದು ಅಥವಾ ಅಸೆಂಬ್ಲಿ ಸದಸ್ಯರಾಗಿರಬಹುದು, ಆದರೂ ಎಲ್ಲರಂತೆ ಅವರು ಆಗಲು ಸಾಧ್ಯವಿಲ್ಲ. ಎನ್ನುವಂತಹ ಮಾತನ್ನು ಈಗಲೂ ಹೇಳುವವರಿದ್ದಾರೆ. ಈ ರೀತಿ ಇಟ್ಟು ಕೊಂಡು ಹೋದರೆ ಈ ದೃಷ್ಟಿಕೋನ ಬದಲಾವಣೆಯಾಗುವುದಿಲ್ಲ. ಇವನು ಹೀನ ಇವನು ಉತ್ತಮ ಎಂದು ಹೇಳುವವರನ್ನು ನೋಡಿದರೆ ಅವನ ದೃಷ್ಟಿಕೋನ ಬದಲಾವಣೆಯಾಗಿಲ್ಲ ಎಂದು ಹೇಳಬಹುದೆ. ವೈಜ್ಞಾನಿಕವಾಗಿ ಮನುಷ್ಯನ, ಹುಟ್ಟು ಮುಂತಾದುವನ್ನು ಅರ್ಥಮಾಡಿಕೊಳ್ಳುವ ಸಂಸ್ಕಾರ, ಪರಿಸ್ಥಿತಿ ನಮಗೆ ಬರಬೇಕು. ಅಧಿಕಾರಗಳನ್ನೂ ಸ್ಥಾನ ಮಾನಗಳನ್ನೂ ಹಂಚಿಕೊಳ್ಳುವ ಒಂದು ಹೋರಾಟದಲ್ಲಿ ಅವುಗಳನ್ನು ಬಿಡಿಗೊತ್ತಿ, ಈ ಹಂಚಿಕೆಯನ್ನು ಆರಂಭ ಮಾಡಿ, ಯಾರಾದರೂ ಸಮಾನವಾದ ಅವಕಾಶಕ್ಕೆ ಸಿಗಬೇಕೆಂದು ವಾದ ಮಾಡಿದರೆ ಅದು ಕೃತ್ರಿಮವಾದ ಕೃತ್ರವಾದ ವಾದವಾಗುತ್ತದೆ ಎಂದು ನಾನಿಲ್ಲಿ ಹೇಳಬಯಸುತ್ತೇನೆ. ನಾವು ಬಹಳಮಟ್ಟಿಗೆ ಒಂದೇ ರೀತಿಯಾಗಿ ಬಹವರಾಗಿದ್ದೇವೆ. ಹೀಗಿರುವಾಗ ಅವನು ಎಷ್ಟುಮಟ್ಟಿಗೆ ಹಿಂದುಳಿದವರು ಎನ್ನುವುದನ್ನು ಹೇಗೆ ನೋಡುವುದು, ಈಗೇನೋ ಶಾಲೆಗಳಲ್ಲಿ ಹೋಗಿ ವಿದ್ಯಾಭ್ಯಾಸಮಾಡುವ ಹುಡುಗರು ಯಾವ ಜಾತಿಯವರೇ ಆಗಿರಲಿ ಥೆ ಥಿಲ್ಲ; ಮತ್ತು ಸುವ್ಯವಸ್ಥಿತವಾದ ವಾತಾವರಣ ಇರತಕ್ಕ ಮಕ್ಕಳಿಗೂ ಮತ್ತು ಇತರರಿಗೂ ವ್ಯತ್ಯಾಸವಿರುವುದಿಲ್ಲ. ವಿದ್ಯಾವಂತರಾದ ತಂದೆ ತಾಯಿಗಳು ಅವರ ಮಕ್ಕಳಿಗೆ ವಿದ್ಯೆಯನ್ನು ಏನಾದರೂ ಆಗಲಿ, ಕಲಿಸುತ್ತಾರೆ. ವಿದ್ಯಾವಂತರಲ್ಲದ ತಂದೆ ತಾಯಿಗಳಿಗೆ ಹುಟ್ಟುವಂತಹ ಮಕ್ಕಳು ಸರಿ ಸಮಾನವಾಗಿರುವುದಕ್ಕೆ ಸಾಧ್ಯವಿಲ್ಲ. ಸಮಾನಾವಕಾಶ ಎನ್ನುವ ಒಂದು ಪ್ರಕರಣವನ್ನು ನಾವು ಈ ಹಂಚಿಕೆಯನ್ನು ಅರ್ಥಮಾಡಿಕೊಳ್ಳದೆ ಎಲ್ಲ ಕಡೆಗಳಲ್ಲಿಯೂ ಅನ್ವಯಿಸಬೇಕು, ಇದು ಮೂಲಭೂತವಾದದ್ದು ಎಂದು ಹೇಳುವುದೆಲ್ಲ ನ್ಯಾಯವಿದೆ ಎನ್ನುವ ವಾದ ಮಾಡತಕ್ಕದ್ದು ತಪ್ಪು. ಇವೊತ್ತು ನಮ್ಮ ಸಮಾಜದಲ್ಲಿ ನಮ್ಮ ಸೋಷಿಯಲಿಸ್ಟ್ ಪಾರ್ಟಿಯಲ್ಲೇ ಈ ವಿಷಯವಾಗಿ ವಿವಾದ ಕೂಡ ಇದೆ. ಜಾತಿಗಳನ್ನು ನಾಶ ಮಾಡಬೇಕೆಂದಿದೆ. ಈ ವಿಷಯ ನಿರ್ಣಯವಾಗಿ ಸಮಗ್ರ ಹೋರಾಟ ಮಾಡಿ ಕೊನೆಗೆ ತೆಗೆದುಕೊಂಡು ಹೋಗಿ ಸ್ತ್ರೀಯರು ಹಿಂದುಳಿದವರು ಎಂದು ನಮ್ಮ ಪಾರ್ಟಿಯವರು ಮಾಡಿದ್ದಾರೆ. ಅವರು ಯಾವ ಜಾತಿಯವರೇ ಆಗಿರಲಿ, ಯಾವ ವರ್ಗದವರೇ ಆಗಿರಲಿ, ನಮ್ಮ ಸಮಾಜದ ಇವೊತ್ತಿನ ಪರಿಸ್ಥಿತಿಯಲ್ಲಿ ಅವರು ಹಿಂದುಳಿದವರು ಎನ್ನುವುದನ್ನು ನಾವು ಎಲ್ಲ ಸಮಾರಂಭಗಳಲ್ಲಿಯೂ ನೋಡುತ್ತೇನೆ.

ಶ್ರೀಮತಿ ರತ್ನಮ್ಮ ಮಾದವರಾವ್.—ಸ್ತ್ರೀಯರೇಕೆ ಹಿಂದುಳಿದವರು? ಅದು ಹೇಗೆ?

ಶ್ರೀ ಎಸ್. ಗೋಪಾಲ ಗೌಡ —ಅವರ ಸ್ಥಿತಿಯನ್ನು ತಾವು ನೋಡಬಹುದು, ತಾವೇ ಈ ಸಭೆಯಲ್ಲಿ ನೋಡಬಹುದು, ತಾವು ಒಬ್ಬರು ಎಂ. ಎಲ್. ಎ. ಆಗಿರಬಹುದು. ಇಲ್ಲಿರುವ ಒಟ್ಟು ಎಂ. ಎಲ್. ಎ. ಗಳನ್ನು ತೆಗೆದುಕೊಂಡರೆ 208 ಜನರಲ್ಲಿ ಈ ಸಭೆಯಲ್ಲಿ ನ್ಯಾಯವಾಗಿ ಸ್ತ್ರೀಯರು 104 ಜನರಿರಬೇಕು. ಆದರೆ ನೀವು ಇಲ್ಲಿಗೆ ಒಂದು ಕಾಡಿಟ್ಟ ಸ್ಥಾನದಿಂದ ಬಂದಿದ್ದೀರಿ. ನೀವೇನೋ ಲಡಾಯಿ ಮಾಡಿ ಜನರಲ್ ಸೀಟಿನಲ್ಲಿ ಬಂದಿರಬಹುದು. ನೀವೇನೋ ಮುಂದುವರಿದವರು ಎನ್ನುವುದನ್ನು ಮೊದಲಿಂದ ಪರಿಗಣನೆಗೆ ತೆಗೆದುಕೊಂಡು ನಿಮ್ಮ ಕ್ಷೇತ್ರದಿಂದ ಆರಿಸಿರುತ್ತಾರೆ. ಆ ಕ್ಷೇತ್ರದಿಂದ ಅಂಬೇಡಕರ್‌ರಂತಹವರನ್ನೇ ಚುನಾಯಿಸಬೇಕೆಂದು ಹೇಳಿದ್ದರೂ, ತಮ್ಮಂತಹವರನ್ನು ಸೋಲಿಸುವುದಕ್ಕೆ ಆಗುತ್ತಿರಲಿಲ್ಲ.

12 Noon

ಎಕ್ಸೆಪ್ಷನ್ನುಗಳು ಇದ್ದೇ ಇರುತ್ತವೆ. ಪ್ರತಿಯೊಂದು ರೂಲಿಗೂ ಎಕ್ಸೆಪ್ಷನ್ ಇರುತ್ತದೆ. ಸರ್ವೆ ಸಾಮಾನ್ಯವಾಗಿ ಹಿಂದೂಸ್ತಾನದಲ್ಲಿ ಇವತ್ತು ನಾಗರಿಕ ದೃಷ್ಟಿಯಿಂದ, ಆಧುನಿಕ ದೃಷ್ಟಿಯಿಂದ ಬಾಳ್ವೆ ಮಾಡತಕ್ಕಂಥ ದೃಷ್ಟಿಯಿಂದ, ಜೀವನ ನಡೆಸಿಕೊಂಡುಹೋಗುವ ದೃಷ್ಟಿಯಿಂದ, ಮುಸ್ಲಿಮರು ಹಿಂದುಳಿದಿದ್ದಾರೆ. ರಾಜಾಸ್ತಾನದಲ್ಲಿ, ಉತ್ತರ ಪ್ರದೇಶದಲ್ಲಿ ಇದನ್ನು ನೋಡಬಹುದು. ನಾನು ಫರೂಕಾಬಾದಿಗೆ ಹೋಗಿದ್ದೆ ; ಅಲ್ಲಿ ಮುಸ್ಲಿಂ ಹೆಂಗಸರು ಬುರ್ಕ ಹಾಕಿಕೊಂಡು ಬಾವಿ ನೀರು ಸೇದುತ್ತಿದ್ದುದು ನೋಡಿದರೆ, ಯಾವತ್ತು ಬಾವಿ ಒಳಗೆ ಬೀಳುತ್ತಾರೋ ಅಂತ ಅನಿಸಿತು. ಒಂದು ಕಾಲದಲ್ಲಿ ಬುರ್ಕ ಅವಶ್ಯಕತೆ ಇದ್ದಿರಬೇಕು. ನನ್ನ ಮುಸ್ಲಿಂ ಮಾನ್ಯ ಸ್ನೇಹಿತರು ತಪ್ಪು ತಿಳಿದುಕೊಳ್ಳದಿದ್ದರೆ ಎಷ್ಟೋ ಜನಕ್ಕೆ ಇದರಿಂದ ಏನು ಕಷ್ಟವಾಗಿದೆ ಅನ್ನುವುದನ್ನು ಹೇಳುತ್ತೇಜೆ. ಬುರ್ಕಯಿಂದ ಅವರ ಜೀವನಕ್ಕೆ ಬಹಳ ಕಷ್ಟವಾಗಿದೆ; ಗಂಡಸರು ಹೊರಗಡೆ ದುಡಿದುಕೊಂಡು ಬಂದು, ಮನೆಗೆ ನೀರನ್ನೂ ತಂದುಕೊಡಬೇಕಾಗಿದೆ. ಇದನ್ನು ಸ್ವಲ್ಪ ವಿಚಾರ ಮಾಡಬೇಕು. ಸಾಮಾನ್ಯವಾಗಿ ಇಬ್ಬರೂ ಇರುತ್ತಾರೆ; ಹೆಣ್ಣು ಗಂಡು ಇಬ್ಬರಿಗೂ ಬಿಟಿನ ಹಕ್ಕಿದೆ ; ಇಬ್ಬರಿಗೂ ನಾಗರಿಕ ಹಕ್ಕು ಬಾಧ್ಯತೆಗಳಿರುವಾಗ, ಅವರೂ ಗಂಡಸಿನಷ್ಟೇ ಪ್ರಗತಿಶೀಲರಾಗಬೇಕು. ಆದರೆ ಜೀವನರಂಗದಲ್ಲಿ ಎಲ್ಲರೂ ಶ್ರೀಮತಿ ರತ್ನಮ್ಮನವರಷ್ಟು, ಶ್ರೀಮತಿ ಯಶೋಧರ ದಾಸಪ್ಪನವರಷ್ಟು ಮುಂದುವರಿದವರು ಎಂದು ಹೇಳುವುದಕ್ಕಾಗುವುದಿಲ್ಲ ಮುಂದುವರಿಕೆ ಅಂದರೆ ಅನೇಕ ಅಂಶಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

Sri J. H. SHAMSUDDIN (Deputy Minister for Electricity).—I think the best way will be for the Hon'ble Member to yield to his better half (*laugyter*).

Sri S. NIJALINGAPPA (Chief Minister)—He has no better half

Sri J. H. SHAMSUDDIN.—If that be the case he has no right to speak on behalf of them because he does not understand them.

ಶ್ರೀ ಎಸ್. ಗೋಪಾಲಗೌಡ.—ನನಗೆ ಮದುವೆಯಾಗಿ ಒಬ್ಬಳು ಮಡದಿ ಅನ್ನುವವಳು ಇಲ್ಲದಿದ್ದರೂ, ತಾಯಿ ಇದ್ದಾಳೆ, ಅಕ್ಕತಂಗಿಯರು ಇದ್ದಾರೆ. ನಾನು ಸಮಾಜಕ್ಕೆ ಆಕಾಶದಿಂದ ಬಿದ್ದವನಲ್ಲ; ನಾನೂ ತಾಯಿಗರ್ಭದಲ್ಲಿ ಬಂದಿದ್ದೇನೆ; ಹೆಣ್ಣೇ ನನ್ನನ್ನೂ ಹೆತ್ತವಳು.

ಆದ್ದರಿಂದ ನಾನು ಹೇಳುವುದು ಹೆಂಡತಿ ಇದ್ದವರಿಗೆ ಮಾತ್ರ ಸ್ತ್ರೀಯರ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿರಬೇಕು ಅಂತ ಹೇಳತಕ್ಕ ಸೂಚನೆಯನ್ನು ನಾನು ಒಪ್ಪುವುದಿಲ್ಲ.

Sri J. H. SHAMSUDDIN.— The Hon'ble Member is not well qualified, not fully qualified.

ಶ್ರೀ ಎಸ್. ಗೋಪಾಲಗೌಡ —ನನಗೆ ಆ ವಿಷಯದಲ್ಲಿ ಅಧಿಕೃತ ಅರ್ಹತೆ ಇರದಿರಬಹುದು ಆದರೆ ನಾನು ಇವತ್ತು ಆ ಸಮಾಜದಲ್ಲಿ ಏನು ನೋಡುತ್ತೇನೆ, ಅದನ್ನು ಹೇಳುತ್ತಿದ್ದೇನೆ. ಪ್ರತಿಯೊಂದು ಸಂಸಾರವೂ ಇಜ್ಜೋಡು. ಮುಸ್ಲಿಂ ಗಂಡಸರು ಹೊರಗೆ ಕೆಲಸ ಮಾಡಿಕೊಂಡು ಬಂದು ಈಗಿರತಕ್ಕಂಥ ಬಾವಿ, ನಲ್ಲಿ ವ್ಯವಸ್ಥೆಯಿಲ್ಲ. ನೀರು ತಂದು ಕೊಡಬೇಕು, ಸಾಮಾನು ಒದಗಿಸಬೇಕು ಸಂಸಾರಕ್ಕೆ ಅಂದರೆ, ಅದು ಅತಿಕಷ್ಟ ಅದು ಹೋಗಬೇಕು. ಒಂದು ದೊಡ್ಡ ಸಂಸಾರದಲ್ಲಿ ಗಂಡಸರು ಹೆಂಗಸರು ಎಲ್ಲರೂ ದುಡಿಯಬೇಕು. ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಒಬ್ಬ ಗಂಡಸು 00ರೂಪಾಯಿ ದುಡಿದು, ಒಂದು ಸಂಸಾರವನ್ನು ಮರ್ಯಾದೆಯಿಂದ ನಡೆಸಿಕೊಂಡು ಹೋಗುವುದಕ್ಕಾಗುತ್ತದೆಯೇ, ಹೆಂಡತಿ, ಮಕ್ಕಳು ಮರಿ ಸಾಕುವುದಕಾಗುತ್ತದೆಯೇ, ಬಹಳ ಕಷ್ಟ. ಆದೇ ಹಳ್ಳಿಗಳಲ್ಲಿ ಇಬ್ಬರೂ ದುಡಿಯುತ್ತಾರೆ; ಎಲ್ಲರೂ ಕೆಲಸ ಮಾಡುತ್ತಾರೆ. ಗಂಡ

ಹೂಡುತ್ತಾನೆ, ಹೆಂಡತಿ ಬತ್ತುತ್ತಾಳೆ, ಕಳೆ ಕೀಳುತ್ತಾಳೆ, ಅವನ ಜೊತೆಯಲ್ಲಿ ಕೆಲಸ ಮಾಡುತ್ತಾಳೆ; ಅವನ ಸಂಸಾರಕ್ಕೆ ಸಹಾಯ ಮಾಡುತ್ತಾಳೆ. ದೆಹಲಯಲ್ಲಿ ನಾನು ಎಷ್ಟೋ ಮಹಿಳೆಯರನ್ನು ನೋಡಿದೆ, ಅವರು ಅಮೇರಿಕ ಮತ್ತು ಯೂರೋಪು ದೇಶದ ಮಹಿಳೆಯರಿಗೆ ಕಡಿಮೆ ಇಲ್ಲದ ರೀತಿಯಲ್ಲಿದ್ದಾರೆ; ಅವರ ಉತ್ತಮ ರೂಪ, ಕೇಶರಾಶಿ, ಅವರ ಆಭರಣಗಳು, ಅವರ ಸೀರೆ ವೈಖರಿ, ನೋಡಿ ಬೆರಗಾಗಿ ಹೋದೆ. ಈಗ ಮುಂಬೈ, ಮದ್ರಾಸ್ ಅಥವಾ ದೆಹಲಯಲ್ಲಿ ನೋಡಿದರೆ ನಮ್ಮ ಮಹಿಳೆಯರು ಯಾವ ಮುಂದುವರಿದ ದೇಶದ ಸ್ತ್ರೀಯರಿಗಿಂತ ಹಿಂದಿಲ್ಲ. ಮಾನ್ಯ ಶ್ರೀಮತಿ ರತ್ನಮ್ಮನವರನ್ನು ಹಿಂದುಳಿದ ಮಹಿಳೆಯೆಂದು ಕರೆಯುವುದಕ್ಕೆ ನಾನು ತಯಾರಿಲ್ಲ. ನಾನು ಈಗ ಅವರಂಥ ಮುಂದುವರಿದ ಮಹಿಳೆಯರ ವಿಷಯ ಮಾತನಾಡುತ್ತಿಲ್ಲ. ಯಾರು ಮೂರೆ ಗುಂಪಾಗಿ, ಯಾವುದೋ ಶಾಸ್ತ್ರಕ್ಕೆ ಕಟ್ಟು ಬಿದ್ದು ಒದ್ದಾಡುತ್ತಿದ್ದಾರೋ ಅವರ ವಿಷಯ ಮಾತನಾಡುತ್ತಿದ್ದೇನೆ; ನಮ್ಮಲ್ಲರುವ ವಿಧವೆಯರ ವಿಚಾರ; ವಿತಂತುವಿನ ತರೆ ಬೋಳಿಸುತ್ತಾರೆ, ಅದನ್ನು ನೋಡಿ ನಮ್ಮ ಕರುಳು ಕಿತ್ತು ಬಂದ ಹಾಗಾಗುತ್ತದೆ, ಜೀವಮಾನವೆಲ್ಲ ಅವಳು ವ್ಯಥೆಯಿಂದ, ಕುತ್ತಿಗೆ ಕವಚಿಕೊಂಡು, ಸಮಾಜದಲ್ಲಿ ಸ್ಥಾನವಿಲ್ಲದೆ ಸಾಯಬೇಕು. ಇದು ಮುಂದುವರಿಕೆಯ ಲಕ್ಷಣವೇ, ಇದು ಸರಿಯೇ ? ಈ ಹಿನ್ನಲೆಯಲ್ಲಿ ನಮ್ಮ ಮಹಿಳೆಯರು ಹಿಂದುಳಿದವರೋ ಅಲ್ಲವೋ ಅನ್ನುವುದನ್ನು ರತ್ನಮ್ಮನವರೇ ನೀವು ತಿಳಿಸಬೇಕು.

ಅದ್ದರಿಂದ ಇದು ಮುಂದುವರಿದ ಸಮಾಜದ ಲಕ್ಷಣವಲ್ಲ. ನಮ್ಮಲ್ಲಿ ಚಿಕ್ಕಮಕ್ಕಳಿಗೆ ಮದುವೆ ಮಾಡುವ ಅಭ್ಯಾಸವಿದೆ. ಅವರನ್ನು ಮೂರೆಗುಂಪಾಗಿ ಇಡತಕ್ಕಂಥಾದ್ದು; ಅವರಿಗೆ ಸ್ವಾತಂತ್ರ್ಯವನ್ನು ಕೊಡದೆ ಹೋಗುವುದು, ಅವರನ್ನು ಶಾಲೆಗೆ ಕಳುಹಿಸಿದರೂ ಅವರಿಗೆ ಹೆಚ್ಚು ಸ್ವಾತಂತ್ರ್ಯವನ್ನು ಕೊಡದಿರುವುದು, ಶಾಲೆಗೆ ಕಳುಹಿಸದೆ ಇರುವುದು, ಹೀಗೆ ನಾನಾ ಅಂಶಗಳನ್ನು ವಿಚಾರ ಮಾಡಿದ ನಂತರ ನಾವು ತೀರ್ಮಾನಕ್ಕೆ ಬಂದಿದ್ದೇವೆ. ಅದೇನೆಂದರೆ ಹಿಂದೂಸ್ತಾನದ ಮಹಿಳೆಯರು ಮುಂದುವರಿದ ಒಂದು ಜನಾಂಗವಲ್ಲ; ಅವರಿಗೆ ವಿಶೇಷ ಅವಕಾಶವನ್ನು ಕಲ್ಪಿಸಿಕೊಡಬೇಕು; ಅವರನ್ನು ಶಾಲೆಗಳಿಗೆ ಹಾಕಬೇಕು; ಅವರುಗಳೆಲ್ಲಾ ದುಡಿಯುವಂತೆ ಆಗಬೇಕು. ಗಂಡಸಿನ ಸಂಸಾರದಲ್ಲಿ ಮತ್ತು ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅವರು ಸಮಭಾಗಿಯಾಗಿ, ಮುಂದುವರಿದು ಬರಬೇಕು. ಆಗಲೇ ನಮಾಜ ಏನಾದರೂ ಮುಂದುವರಿಯುವುದಕ್ಕೆ ಸಾಧ್ಯ ಎಂದು ಮನಗಂಡು, ಸ್ತ್ರೀಯರು ಹಿಂದುಳಿದವರು ಎಂದು ಹೇಳಿದ್ದು.

ಇನ್ನು ಹರಿಜನ ಗಿರಿಜನರ ಬಗ್ಗೆ ವಿವಾದವಿಲ್ಲ. ಅವರು ಹಿಂದುಳಿದವರು. ಅವರು ಎಲ್ಲ ಕ್ಷೇತ್ರದಲ್ಲಿಯೂ, ಇತರೆ ಜನಾಂಗದ ಜೊತೆಯಲ್ಲಿ ಸರಿಸಮಾನಾದ ಸಂಖ್ಯೆಗೆ ಬರುವತನಕ, ವಿದ್ಯೆಯಲ್ಲಿ, ಸಂಸ್ಕೃತಿಯಲ್ಲಿ, ಆರ್ಥಿಕ ಪರಿಸ್ಥಿತಿಯಲ್ಲಿ, ಇತರಾಂಶ್ಗಳು ಮುಂದುವರಿಯುವವರೆಗೆ ಅವರಿಗೆ ವಿಶೇಷವಾದ ಅವಕಾಶಗಳನ್ನು ಕಲ್ಪಿಸಿಕೊಡಲೇಬೇಕು.

ಇನ್ನು ಮುಸ್ಲಿಮರು ಕೂಡ ಬಹಳ ಹಿಂದುಳಿದವರು. ಅವರು ಮೊದಲನಿಂದಲೂ ಅಡಳಿತ ಜಾತಿಗೆ ಸೇರಿಬಂದಿದ್ದಾರೆ. ಅವರಲ್ಲಿ ಕೆಲವರು ಸಣ್ಣ ಸಣ್ಣ ಕಸಬುಗಳನ್ನು ಮಾಡಿಕೊಂಡು ಬಹಳ ಹೀನಸ್ಥಿತಿಯಲ್ಲಿದ್ದಾರೆ. ಅವರನ್ನು ಶಾಲೆಗಳಿಗೆ ಕಳುಹಿಸುವ ಮತ್ತು ಇತರ ವಿಶೇಷ ಸೌಲಭ್ಯಗಳನ್ನು ಕೊಟ್ಟು ಎಲ್ಲ ರೀತಿಯಲ್ಲಿಯೂ ಸಹಾಯ ಮಾಡಬೇಕು.

ಹೀಗೆ ಸಮಾಜದಲ್ಲಿ ಹಿಂದುಳಿದ ವರ್ಗ ಮತ್ತು ಅನುಸೂಚಿತ ಜಾತಿಯ ಪಟ್ಟಿ ಇದೆ. ಅದನ್ನು ಪರಿಷ್ಕಾರ ಮಾಡಬೇಕು ಅವರಿಗೆ ವಿಶೇಷ ಅವಕಾಶಗಳನ್ನು ಕಲ್ಪಿಸಿಕೊಟ್ಟು, ಅವರು ಎಲ್ಲ ರೀತಿಯಲ್ಲಿಯೂ ಮುಂದುವರಿದುಕೊಂಡು ಹೋಗುವುದಕ್ಕೆ ನಾವು ಪ್ರಯತ್ನ ಮಾಡಬೇಕು

ಇದರಲ್ಲಿ ಒಂದು ಮಾತ್ರ ನಾನು ಹೇಳುತ್ತೇನೆ; ವಿದ್ಯಾಭ್ಯಾಸದ ವಿಷಯದಲ್ಲಿ ತಾರತಮ್ಯ ಮಾಡತಕ್ಕುದಲ್ಲ ಅನ್ನುವುದು ನಮ್ಮ ಅಭಿಮತ. ಮಗುವನ್ನು ಶಾಲೆಗೆ ಕಳುಹಿಸುವಾಗ ಜಾತಿಗಳ ಮೇರೆ ತಾರತಮ್ಯವಾಗಬಾರದು, ಸೀಟುಗಳನ್ನು ಹಂಚುವಾಗ ಜಾತಿಗಳ ಆಧಾರದಮೇರೆ ಹಂಚಿಕೆಯಾಗಬಾರದು ಎಂದು ನಾವು ಒಪ್ಪಿದ್ದೇವೆ. ಆದರೆ ಸಾವಿರಾರು ಅರ್ಜಿಗಳಿರುವಾಗ, 100 ಸೀಟುಗಳನ್ನು ಹಂಚಬೇಕಾದರೆ ಏನು ಆಧಾರದ ಮೇರೆ ಹಂಚಬೇಕು ಅನ್ನುವುದನ್ನು ತಾವು ವಿಚಾರ ಮಾಡಬೇಕು. ಇದರ ಬಗ್ಗೆ ತುಂಬ ಗೊಂದಲವಿದೆ. ತಾವು ಮಾಡತಕ್ಕಂಥ ಪ್ರತಿಯೊಂದು ತೀರ್ಮಾನವೂ ನ್ಯಾಯಾಲಯಕ್ಕೆ ಹೋಗುತ್ತದೆ; ಅದರ ವಿರುದ್ಧವಾಗಿ ನ್ಯಾಯಾಧೀಶರು ಅಭಿಮತ ಕೊಡುತ್ತಾರೆ; ಇಂಥ ಒಂದು ಸನ್ನಿವೇಶವಿದೆ. ಇಂಥ ಗಹನವಾದ ವಿಚಾರವನ್ನು ಈ ಮಾನ್ಯ ಸಭೆಯಲ್ಲಿ ಪರ್ಯಾಲೋಚನೆ ಮಾಡಬೇಕು; ಸರ್ಕಾರದವರೂ ತೀವ್ರವಾಗಿ ಆಲೋಚನೆ ಮಾಡಬೇಕು; ಸಮಾಜವೂ ಆಲೋಚನೆ ಮಾಡಬೇಕು. ಇವತ್ತು ಎಲ್ಲ ಮುಖಂಡರೂ ಅದರ ಹಿನ್ನೆಲೆಯನ್ನು ಗಮನಿಸಿ, ಸವಲತ್ತುಗಳನ್ನು ಕೊಡುವುದಕ್ಕೆ ಹೆಚ್ಚು ಸಹಾಯ ಮಾಡಬೇಕಾಗುತ್ತದೆ, ಕೇವಲ ಬಡವರಿಗೆ ಮಾತ್ರ ಸೀಟುಗಳನ್ನು ಕೊಡುತ್ತೇವೆಂದು ಮಾಡಿದಾಗಲೂ ಕೂಡ ಸರಿಯಾಗುವುದಿಲ್ಲ. ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಯಾರು 1,200, 2,400 ರೂಪಾಯಿ ವಾರ್ಷಿಕ ವರಮಾನದ

(ಶ್ರೀ ಎಸ್. ಗೋಪಾಲಗೌಡ)

ಆಧಾರದ ಮೇಲೆ ರಿಯಾಯಿತಿ ನಿರೀಕ್ಷೆ ಮಾಡುತ್ತಾರೋ ಅವರಿಗೆ ಸೀಟುಗಳಿಲ್ಲವೆಂದರೆ, ಆಗಲೂ ನ್ಯಾಯ ಮಾಡಿದಂತಾಗುವುದಿಲ್ಲ. ನಾವು ಹೆಚ್ಚಿಗೆ ಶಾಲೆಗಳನ್ನು ತೆಗೆಯಬೇಕು. ನಮ್ಮಲ್ಲಿ ಎಷ್ಟು ಜನರಿಗೆ ಬೇಕು ಅನ್ನುವುದನ್ನು ನೋಡಿಕೊಳ್ಳಬೇಕು ಮತ್ತು ಸಾಮಾನ್ಯವಾಗಿ ಒಂದಲ್ಲ ಒಂದು ಕಡೆ, ಮುಂದೆ ಓದುತ್ತೇವೆ ಅನ್ನುವವರೆಗೆ ಅವಕಾಶ ಕೊಡಬೇಕಾಗುತ್ತದೆ. 100ಕ್ಕೆ 10ಜನ ಓದುವಾಗ ಯಾವ ವ್ಯವಸ್ಥೆಯಿತ್ತೋ ಅದನ್ನು ಈಗ 100ಕ್ಕೆ 100ಜನ ಓದುತ್ತೇವೆ ಅನ್ನುವಾಗ ಇಟ್ಟು ಕೊಂಡರೆ, ಆ ಒಂದು ತತ್ವವನ್ನು ಅನುಸರಿಸಿದರೆ ವಿದ್ಯಾರ್ಥಿಗಳನ್ನು ವಿದ್ಯಾಸಂಸ್ಥೆಗಳಿಗೆ ಸೇರಿಸಿ ಕೊಳ್ಳಲಾಗುವುದಿಲ್ಲ.

ಮೂಲಭೂತವಾದ ಈ ಸಮಸ್ಯೆಯನ್ನು ಹೋಗಲಾಡಿಸಬೇಕಾದರೆ, ಹತ್ತಾರು ದಿಕ್ಕುಗಳಲ್ಲ ಏಕಕಾಲದಲ್ಲಿ ಸರ್ಕಾರ ಶ್ರಮಿಸಬೇಕಾಗುತ್ತದೆ. ಆರ್ಥಿಕವಾಗಿ ಹಿಂದುಳಿದಿರತಕ್ಕ ಈ ಜನಾಂಗ ಗಳನ್ನು, ಮುಂದೆ ತರಬೇಕು, ಸಾಮಾಜಿಕವಾಗಿರತಕ್ಕ ವಿಶೇಷ ನ್ಯೂನತೆಗಳೇನಿವೆ, ಸಹಸ್ರಾರು ವರ್ಷಗಳಿಂದ ಬೆಳೆದುಕೊಂಡು ಬಂದಿರತಕ್ಕ ತಾರತಮ್ಯವೇನಿದೆ, ಅದನ್ನೂ ಹೋಗಲಾಡಿಸುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು, ಆ ಕಾರ್ಯಕ್ರಮಗಳನ್ನೂ ನಾವು ಮನಃಪೂರ್ತಿಯಾಗಿ ಕಾರ್ಯಗತ ಮಾಡಬೇಕು. ಮನಃಪೂರ್ತಿಯಾಗಿ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಹರಿಶ್ಚಂದ್ರ ನನ್ನ ವೀರವಾಹು ಕೊಂಡುಕೊಳ್ಳುತ್ತಾನೆ. ಅದಕ್ಕೆ ಮೊದಲು ಹರಿಶ್ಚಂದ್ರನು ಹೇಳುವುದನ್ನು ಕವಿ ವರ್ಣಿಸಿದ್ದಾನೆ. ನನ್ನನ್ನು ನಾನು ಮಾರಿಕೊಳ್ಳುತ್ತೇನೆ ಎಂದು ಕಾಶೀ ಪಟ್ಟಣದಲ್ಲಿ ಟಾಂ ಟಾಂ ಹೊಡೆದುಕೊಳ್ಳುತ್ತಾನೆ ಮನಸ್ಸಿನಿಂದ ಮಾಟ್ಟಸೆ ಮಾಡುತ್ತೇನೆ ಎಂಬುದಾಗಿ ಹೇಳುತ್ತಾನೆಂದು ಕವಿ ಚೆನ್ನಾಗಿ ಚಿತ್ರಿಸಿದ್ದಾನೆ. ಹಾಗೆ ಹರಿಜನರ ಬಗ್ಗೆ ನಡೆಯಬೇಕು. ಎಲ್ಲೋ ಸಮಾರಂಭದ ಕಣ್ಣೀರನ್ನು ಕರೆವರೆ ಪ್ರಯೋಜನವಿಲ್ಲ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಶ್ರೀ ಜಗಜೀವನರಾಂ ಅವರು ಮಂತ್ರಿಮಂಡಲದಿಂದ ಹೊರಬಂದ ಮೇಲೆ ಅವರ ಅಭಿಪ್ರಾಯವನ್ನೂ ಹೇಳುತ್ತಾರೆ. ನಮ್ಮ ರಾಜ್ಯದಲ್ಲಿ ಹರಿಜನರು ರಾಜೀನಾಮೆ ಕೊಡುತ್ತಾರೆ ಮತ್ತು ಮಾನ್ಯ ನಿಜ ಲಿಂಗಪ್ಪನವರು ಏನೋ ಸಮಾಧಾನ ಹೇಳಿದರೆಂದು ಮತ್ತೆ ವಾಪಸು ತೆಗೆದುಕೊಳ್ಳುತ್ತಾರೆ...

ಶ್ರೀ ಗೋಪಾಲ ಸಾರೆನ್ನ.—ಎಲ್ಲರೂ ವಾಪಸು ತೆಗೆದುಕೊಂಡಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ನಾನು ಹರಿಜನ ಸದಸ್ಯರಲ್ಲಿ ವಿಶೇಷವಾಗಿ ವಿನಂತಿ ಮಾಡಿ ಕೊಳ್ಳುವುದು ತಮ್ಮ ಸಮಾಜದ ಸ್ಥಿತಿಗತಿಗಳನ್ನು ತಾವು ಮೊದಲು ಅರ್ಥ ಮಾಡಿಕೊಳ್ಳಬೇಕು, ನಿಮಗೆ ಇವತ್ತು ಒಂದು ಎಂ. ಎಲ್. ಎ. ಸ್ಥಾನ ಸಿಕ್ಕಿರಬಹುದು. ಮಂತ್ರಿಗಳ ಸ್ಥಾನ ಸಿಕ್ಕಿರ ಬಹುದು. ಆದರೆ ನಿಮ್ಮ ಕೇರಿ, ನೀವು ವಾಸಮಾಡತಕ್ಕ ಸ್ಥಳ, ನಿಮ್ಮ ಅಕ್ಕ ತಂಗಿಯರು, ನಿಮ್ಮ ಅಣ್ಣ ತಮ್ಮಂದಿರು, ನಿಮ್ಮ ಸಹೋದರರು ಇವೊತ್ತು ಹೇಗೆ ಜೀವಿಸುತ್ತಿದ್ದಾರೆ, ಏನು ಊಟ ಮಾಡು ತ್ತಾರೆ, ಅವರು ಏನು ರೀತಿಯಲ್ಲಿ ಬದುಕಿದ್ದಾರೆ, ಅದನ್ನೂ ನೀವು ನಿಮ್ಮ ಕಣ್ಣುಗಳಲ್ಲಿ ನೋಡ ಬೇಡವೇ? ನಿಮ್ಮ ಕರುಳು ಅದಕ್ಕಾಗಿ ಮರುಗಬೇಡವೇ? ನಿಮ್ಮ ತಾಯಿಯರನ್ನು, ನಿಮ್ಮ ಸಹೋದರರನ್ನು ಮರೆಯುವುದಕ್ಕಾಗುವುದಿಲ್ಲ. ಯಾರು ಏನೇ ಹೇಳಲಿ, ಈ ಮಾನ್ಯ ಸಭೆಯಲ್ಲಿ ರುವ ಮಾನ್ಯ ಸದಸ್ಯರಿಗೆ ನಾನು ಹೇಳುವುದಿಷ್ಟೇ: ಅವರ ಹೆಸರಿನಲ್ಲಿ ನಿಮಗೆ ಸ್ಥಾನ ಮಾನಗಳು ಸಿಕ್ಕಿವೆ, ಆದರೆ ಅದು ಅವರಿಗಾಗಿ ಸದುಪಯೋಗವಾಗಿಲ್ಲ. ಶ್ರೀಮತಿ ಸಬ್ಬಮ್ಮನವರು ಹೇಳಿದ ಹಾಗೆ ಮಾನ್ಯ ಮಂತ್ರಿಗಳಾದ ಮಾಶೋಧರಮ್ಮನವರು ತಮ್ಮ ಜೀವಮಾನವನ್ನೆಲ್ಲ ಇವರ ಸೇವೆಗಾಗಿ ಮುಡುಪಾಗಿಟ್ಟು ದುಡಿದಿದ್ದಾರೆ, ಹರಿಜನರಿಗಾಗಿ ಹೆಚ್ಚಾಗಿ ದುಡಿದಿದ್ದಾರೆ. ಆದರೆ ಅವರಿಗೂ ಕೂಡ ಹಣವನ್ನು ಹಂಚುವಾಗ ಎಲ್ಲಿ ಹೋಗುತ್ತದೆ ಏನಾಗುತ್ತದೆ, ಬಡವರಿಗೆ ಸಿಕ್ಕುತ್ತದೆಯೇ, ಹಾಸ್ಟಲಿಗಾಗಿ ಕೊಟ್ಟ ಹಣ ಯಾರ ಕೈಸೇರುತ್ತದೆ ಎನ್ನುವುದು ಗೊತ್ತಾಗುವುದಿಲ್ಲ.

ಸರ್ಕಾರದವರು ನಮಗೆ ಭಿಕ್ಷೆ ಹಾಕುತ್ತಿದ್ದಾರೆಯೋ ಏನೋ, ದಯೆ, ಕರುಣೆ ತೋರಿಸುತ್ತಿ ದ್ದಾರೆಯೋ ಏನೋ ಎಂದು ತಿಳಿಯಬಾರದು. ಇದು ಕರುಣೆಯ ಪ್ರಶ್ನೆಯಲ್ಲ. ಇವೊತ್ತಿನ ದಿವಸ ಸಮಾಜ ನಿಮ್ಮನ್ನು ನೋಡಿಕೊಂಡಿರತಕ್ಕ ದೃಷ್ಟಿಯನ್ನು ನೋಡಿದರೆ ನೀವು ಈ ಸಮಾಜದ ಮೇಲೆ ದಂಗೆ ಏಳಬಹುದು, ಅಂಥ ಪರಿಸ್ಥಿತಿ ಇದೆ. ಕಾಲಾನುಕಾಲದಿಂದ ನಿಮ್ಮ ಬೆನ್ನು ಬಗ್ಗಿಹೋಗಿದೆ, ಸಾವಿರಾರು ಜನರು ತುಳಿದು ತುಳಿದು ಬೆನ್ನು ನೆಲಕ್ಕೆ ಹತ್ತಿಹೋಗಿದೆ. ಹೀಗೆ ಬಗ್ಗಿ ಹೋಗಿರುವ ಬೆನ್ನನ್ನು ನೇರಮಾಡಲು ಪ್ರಯತ್ನಿಸಬೇಕು. ಪರಂಪರೆಯಿಂದ ಬಗ್ಗಿಹೋಗಿದೆ ಬೆನ್ನು. ಅದನ್ನೂ ಯೋಚನೆ ಮಾಡಬೇಕು. ನಾನು ಸಮಾಜದಲ್ಲಿ ಬೇರೆಯವರಿಗಿಂತ ಯಾವ ದೃಷ್ಟಿಯಲ್ಲಯೂ ಕಡಮೆ ಇಲ್ಲ, ನನಗೆ ಹಕ್ಕುಗಳು ರಾಜ್ಯಾಂಗ ಬದ್ಧವಾಗಿ ಬಂದಿವೆ, ನಾನು ಬದುಕುವುದಕ್ಕೆ ಅವಕಾಶವಿದೆ.

ಅವಕಾಶವಿಲ್ಲದೆ ಇದ್ದರೆ ಅವಕಾಶವನ್ನು ಕಲ್ಪಿಸಿಕೊಳ್ಳುತ್ತೇನೆ ಎನ್ನುವ ಸ್ಪಷ್ಟವಾದ ಪ್ರಜ್ಞೆ, ಕೆಚ್ಚು, ದಿಟ್ಟತನ, ಹೋರಾಡತಕ್ಕ ಶಕ್ತಿ, ಒಗ್ಗಟ್ಟು, ಇವು ಹಿಂದುಳಿದ ಜನಾಂಗಗಳಲ್ಲಿ, ಅನುಸೂಚಿತ ಜಾತಿಗಳಲ್ಲಿ ಬರಬೇಕು.

ಇನ್ನೊಂದು ವಿಷಾದಕರ ಸಂಗತಿ ಎಂದರೆ ಅವರಲ್ಲಿ ಅನೇಕ ಪಂಗಡಗಳಿವೆ ಎಂದು ನಾನು ಒಪ್ಪುತ್ತೇನೆ. ಸ್ವಲ್ಪ ಸ್ವಲ್ಪ ವ್ಯತ್ಯಾಸಗಳಿರುತ್ತವೆ. ಒಕ್ಕಲಿಗರಲ್ಲಿ, ಲಿಂಗಾಯತರಲ್ಲಿ, ಬ್ರಾಹ್ಮಣರಲ್ಲಿ, ಮುಸಲ್ಮಾನರಲ್ಲಿ, ಎಲ್ಲರಲ್ಲಿ ವ್ಯತ್ಯಾಸಗಳಿವೆ. ಎಲ್ಲ ಜಾತಿಗಳಲ್ಲಿಯೂ ವ್ಯತ್ಯಾಸಗಳಿವೆ. ಅಂದ ಮಾತ್ರಕ್ಕೆ ಈ ವ್ಯತ್ಯಾಸಗಳನ್ನು ನಾವು ವಿಶೇಷ ಮಾಡಿಕೊಂಡು ಅದೇ ಕಚ್ಚಾಟದಲ್ಲಿ ಕಾಲಹರಣ ಮಾಡಿ ಇಡೀ ಸಮಾಜದ ಅಧೋಗತಿಗೆ ಕಾರಣರಾಗಬಾರದು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ನಮ್ಮುತಿಯಿಂದ ತಮ್ಮೆಲ್ಲ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಒಗ್ಗಟ್ಟಾಗಿದ್ದರೆ, ನಿಮ್ಮಲ್ಲಿ ಭಾಗೃತಿಯುಂಟಾದರೆ, ನಾವು ಯಾವ ಸ್ಥಿತಿಗೆ ಬಂದಿದ್ದೇವೆ, ಏತಕ್ಕಾಗಿ ಬಂದೆವು, ಯಾರು ನಮ್ಮನ್ನು ಹೀಗೆ ತುಳಿಯುತ್ತಾರೆ ಎನ್ನತಕ್ಕ ಪ್ರಜ್ಞೆ, ತಿಳಿವು ಹಿಂದುಳಿದವರಿಗೆ ಬಂದರೆ ಆಗ ಅವರನ್ನು ತುಳಿಯುವುದಕ್ಕೆ ಸಾಧ್ಯವಿಲ್ಲ ಮತ್ತು ಅವರು ಹೋಗುವ ದಾರಿಯಲ್ಲಿ ಅಡ್ಡಿಪಡಿಸುವುದಕ್ಕೂ ಸಾಧ್ಯವಿಲ್ಲ.

ಈ ಕೆಲವು ಮಾತುಗಳನ್ನು ಹೇಳಿದ ನಂತರ ಈ ನಿರ್ಣಯವನ್ನು ಮಾನ್ಯ ಸರ್ಕಾರದವರು ವಿಶೇಷ ಎಚ್ಚರಿಕೆಯಿಂದ ಗಮನಿಸಿ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಹೊಸ್ನ ಒಂದು ಪ್ರಶ್ನೆಗೆ ಉತ್ತರ ಕೊಟ್ಟರು. ಈ ಮಾನ್ಯ ಸಭೆಯಲ್ಲಿ. ಕೆಲವು ಇಲಾಖೆಗಳಲ್ಲಿ ಅವರು ಇಲ್ಲವೇ ಇಲ್ಲ, ಬರುವುದೇ ಇಲ್ಲ, ಅವರು ಕರೆದರೂ ಬರುವುದಿಲ್ಲ. ಅನುಭವವಿರುವವರು ಇಲ್ಲ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಅವರು ಚೆಂಪೋರಿಯಾಗಿತ್ತು, ಬೇರೆಯವರನ್ನು ತಗದುಕ್ಕೊಂಡೆವು, ಪ್ರಮೋಷ್ಟ ಇತ್ತು, ಅದಕ್ಕಾಗಿ ಬೇರೆಯವರಿಗೆ ಕೊಟ್ಟೆವು, ಎಂದು ಹೇಳುವುದೆಲ್ಲ ಬುದ್ಧಿವಂತಿಕೆಯಿಂದ ಕಾನೂನನ್ನು ಮೀರಿಯತಕ್ಕ ವಿಧಾನಗಳು. ತತ್ವ ಭ್ರಷ್ಟತೆ ಇದರಲ್ಲಿ ಬರುತ್ತದೆ, ಅರ್ಹ ಮನಸ್ಸಿನ ಪ್ರಯತ್ನ ಇದರಲ್ಲಿ ಎದ್ದು ಕಾಣುತ್ತದೆ. ಇದು ಪ್ರದರ್ಶನಕ್ಕಾಗಿ ಆಗಬಾರದು, ಪ್ರದರ್ಶನದ ರೀತಿಯಲ್ಲ ಆಗಬಾರದು. ಏಕೆಂದರೆ ಹರಿಣ್ಣಯ್ಯನವರು ಒಂದು ನಾಟಕದಲ್ಲಿ ನಟಿಸಿ ಬೇಡ, ನಿನ್ನ ಕಣ್ಣಲ್ಲಿ ನೀರಿಯಾಗಿ ಭಕ್ತರಸ ಹರಿಯಬೇಕು ಎಂದು ಹೇಳಿದರು. ಅದನ್ನು ನಾನೂ ಹೇಳುತ್ತೇನೆ. ಹರಿಜನರ ಉದ್ಧಾರ ಸಂಸ್ಥೆಗಳಿಗೆ ಅಧ್ಯಕ್ಷರಾಗಿದ್ದು, ಸಮಾರಂಭದಲ್ಲಿ ನಿಜಲಿಂಗಪ್ಪನವರು ಬರುತ್ತಾರೆಂದು ಅವರು ಬಂದಾಗ ಅವರೊಡನೆ ಸಹಪಂಕ್ತಿ ಭೋಜನವನ್ನು ಮಾಡಿ, ಮನೆಗೆ ಹೋಗಿ ಸ್ನಾನ ಮಾಡುವುದಲ್ಲ. ಅವರನ್ನು ಮುಟ್ಟಬೇಕಾಗುತ್ತದೆ, ಹತ್ತು ಜನ ನೋಡುವ ಹಾಗೆ ಮುಟ್ಟಬೇಕಾಗುತ್ತದೆ. ಅವರ ಜೊತೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಅವನು ಬೇರೆಯವನು, ಅವನು ಹೀನ ಎನ್ನುವ ಭಾವನೆ ಇರಬಾರದು. ಅವನ ಬಗ್ಗೆ ಅನುಕಂಪ ಮನಸ್ಸಿನಲ್ಲಿ ಮೂಡಿ ಹೃದಯದಲ್ಲಿ ಮಿಡಿಯಬೇಕು.

Unity, emotional integrity ಎಂದು ಬಾಯಿ ಮಾತುಗಳನ್ನು ಹೇಳಿದರೆ ಸಾಲದು. ಇವೆಲ್ಲ ಬೇರೆ ಲೋಕದಲ್ಲಿರುವವರು ಹೇಳುವ ಮಾತು. ಇಲ್ಲಿರುವವರು ಹೇಳಬೇಕಾದರೆ ಮುಟ್ಟಿ ಹೇಳಬೇಕಾಗುತ್ತದೆ. ಈ ಸಮಾಜದಲ್ಲಿ ನಿಜವಾಗಿಯೂ ಕಳಂಕಪೂರ್ಣವಾಗಿದೆ. ಈ ಕಳಂಕವು ಬಹಳ ಆಳವಾಗಿ, ಅಂಗಾಂಗಗಳಲ್ಲಿ ಹಬ್ಬಿದೆ. ಆದಕ್ಕೆ ನೀರಿಯಾದ ಚಿಕಿತ್ಸೆಯಾಗಬೇಕು. ಹೊದಲು ಕೆಳಗೆ ಬಿದ್ದಿರುವವರು ಎಚ್ಚರರಾಗಿ, ಯಾವ ಕಾರಣದಿಂದ ನಾವು ಹೀಗಾಗಿದ್ದೇವೆಂದು ಅವರು ತಿಳಿದುಕೊಂಡು ಅದಕ್ಕೆ ಪರಿಹಾರವನ್ನೂ ಹುಡುಕಿ ಹೋರಾಟ ಮಾಡಿ ತಮ್ಮ ಸ್ಥಾನವನ್ನು ಈ ಸಮಾಜದಲ್ಲಿ ಬೆಳಸಿಕೊಳ್ಳಬೇಕು. ಆದುದರಿಂದ ನಾನು ಈ ನಿರ್ಣಯವನ್ನು ತಂದಿರುವ ವಿಷಯದಲ್ಲಿ ಬಹಳ ಹೇಳಬೇಕಾದ್ದಿಲ್ಲ. ಈಗ ಉತ್ತಮರಲ್ಲಿಯೂ ಕನಿಷ್ಠರಲ್ಲಿಯೂ ಎಲ್ಲರಲ್ಲಿಯೂ ವ್ಯತ್ಯಾಸಗಳಿವೆ. ಅದಕ್ಕೆ ಕಾರಣಗಳಿರಬಹುದು. ಇದಕ್ಕೆ ನಾನು ಹೇಳುವುದು ವೈಜ್ಞಾನಿಕ, ಮಾನವೀಯ ಮತ್ತು ಆಧುನಿಕ ದೃಷ್ಟಿಕೋಣವನ್ನು ಬೆಳಸೋಣ. ಅದರಿಂದ ಈ ಸಮಾಜದ ರೋಪ ದೋಷಗಳನ್ನೂ ತಿದ್ದಿಕೊಳ್ಳೋಣ. ಈ ಮಾತುಗಳನ್ನು ಹೇಳಿ ಮಾನ್ಯ ಜೆ. ಪಿ. ಸರ್ವೇಶ್ ಅವರು ತಂದಿರುವ ಈ ನಿರ್ಣಯವನ್ನು ಒಪ್ಪಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಒತ್ತಾಯಪಡಿಸಿ ನನ್ನ ಮಾತನ್ನು ಮುಗಿಸುತ್ತೇನೆ, ಸ್ವಾಮಿ.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಮಾನ್ಯ ಸದಸ್ಯರಾದ ಶ್ರೀಮಾನ್ ಜೆ. ಪಿ. ಸರ್ವೇಶ್‌ರವರು ಮಂಡಿಸಿರತಕ್ಕಂಥ ಈ ನಿರ್ಣಯವನ್ನು ಸ್ವಾಗತಿಸುವುದಲ್ಲದೆ ಇದಕ್ಕೆ ಬೆಂಬಲ ಕೊಟ್ಟು ಕೆಲವು ವಿಷಯಗಳ ಬಗ್ಗೆ ಮಾತನಾಡುತ್ತೇನೆ. ಇದುವರೆಗೆ ಮಾತನಾಡಿದ ಮಹನೀಯರು ಈ ನಿರ್ಣಯದ ಪರವಾಗಿ ಮಾತನಾಡಿದ್ದಾರೆ. ಸರಕಾರಕ್ಕೆ ಅನೇಕ ಉಪಯುಕ್ತ ಸೂಚನೆಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಸಹ ಸರಕಾರ ಪರಿಪಾಲಿಸತಕ್ಕಂಥ ಒಳ್ಳೆ ಸಲಹೆಗಳನ್ನು ಶ್ರೀಮಾನ್ ಗೋಪಾಲ ಗೌಡರು ಮತ್ತು ಶ್ರೀಮಾನ್ ಕೃಷ್ಣಶೆಟ್ಟಿಯವರು ವಿವರವಾಗಿ ತಿಳಿಸಿದ್ದಾರೆ. ನಮ್ಮ ರಾಜ್ಯಾಂಗ ಪತ್ರವಾದ ಹಲವಾರು ಹಕ್ಕುಗಳಲ್ಲಿ ಮುಖ್ಯವಾಗಿ ಹಿಂದುಳಿದವರ ಬಗ್ಗೆ, ಅನು

(ಶ್ರೀ ಆರ್. ಮುನಿಸ್ವಾಮಯ್ಯ)

ಸೂಚಿತ ಜಾತಿಯವರಿಗೆ ಹುದ್ದೆಗಳು ಎಷ್ಟರ ಮಟ್ಟಿಗೆ ಇರಬೇಕು, ಯಾವ ಸಂಖ್ಯೆಯಲ್ಲಿರಬೇಕು ಎಂಬುದನ್ನು ಒತ್ತಾಯ ಪೂರ್ವಕವಾಗಿ 335-16 (1) ಮತ್ತು 16 (4)ನೇ ಪ್ರಕರಣದಲ್ಲಿ ವಿವರಿಸಿದ್ದಾರೆ. ಅವುಗಳಲ್ಲಿ ಕೆಲವು ಸಲಹೆಗಳನ್ನು ಸರಕಾರದವರು ಪರಿಪಾಲಿಸಿಲ್ಲ ಅಥವಾ ಪರಿಪಾಲಿಸಲು ಸಾಕಷ್ಟು ಆಸಕ್ತಿಯಿಂದ ನಡೆಸುತ್ತಿದ್ದಾರ್ಯೂ ಕೆಲವು ಅಕ್ರಮಗಳು ನಡೆದಿವೆ. ರಾಜ್ಯಾಂಗದತ್ತ ಹಕ್ಕಿನ ಬಗ್ಗೆ ಶ್ರೇಷ್ಠ ನ್ಯಾಯಾಲಯವು ಒಂದು ತೀರ್ಮಾನ ಕೊಟ್ಟಿದೆ. ಹಿಂದುಳಿದವರಿಗೆ ಅನುಸೂಚಿತ ಜಾತಿಯವರಿಗೆ ಸಾಕಷ್ಟು ಪ್ರಾಧಾನ್ಯ ಕೊಡಬೇಕೆಂದು ತೀರ್ಮಾನ ಕೊಟ್ಟು ಎರಡು ಮೂರು ವರ್ಷವಾಯಿತು. ಇಂದಿನವರೆಗೆ ನಮ್ಮ ರಾಜ್ಯದಲ್ಲಾಗಲಿ ಬೇರೆ ರಾಜ್ಯದಲ್ಲಾಗಲಿ ಈ ನಿರ್ಣಯ ಪರಿಪಾಲನೆಯುವುದಕ್ಕೆ ಸಾಕಷ್ಟು ಕ್ರಮ ನಡೆಸಿಲ್ಲ ಎಂಬುದು ಕಂಡುಬರುತ್ತದೆ. ಆಂಧ್ರ ಪ್ರದೇಶದಲ್ಲಿ ಮಾತ್ರ ಈ ನಿರ್ಣಯ ರೂಢಿಗೆ ತಂದಿದ್ದಾರೆ. ಈ ನಿರ್ಣಯಕ್ಕೆ ಗೌರವ ಕೊಟ್ಟು ಯಾವ ಯಾವ ಇಲಾಖೆಯಲ್ಲಿ ಕೊರತೆ ಇತ್ತೋ ಅಲ್ಲ ಅವರಿಗೆ ಪ್ರಮೋಷನ್ ಮೂಲಕ ನೇರವಾದ ಸೆಲೆಕ್ಷನ್ ಮೂಲಕ ಈ ನಿರ್ಣಯದ ತೀರ್ಪನ್ನು ಮನ್ನಣೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲ ಸಾವಿರಾರು ಬೇರೆ ಬೇರೆ ಹುದ್ದೆಗಳಿಗೆ ಅಧಿಕಾರಿಗಳಿಗೆ ನೇರವಾದ ಪ್ರಮೋಷನ್ ಕೊಟ್ಟು ತುಂಬಿದ್ದಾರೆ. ಆದರೆ ಸರಕಾರದ ಈ ಕ್ರಮದಿಂದ ಅನುಸೂಚಿತ ಜಾತಿಯವರು, ಹಿಂದುಳಿದವರು ಪಡೆಯಬೇಕಾಗಿದ್ದ ಭಾಗ ಪಡೆದಿಲ್ಲ, ಅವರಿಗೆ ಕೊಡತಕ್ಕಂಥಾದ್ದನ್ನು ಕೊಟ್ಟಿಲ್ಲ ಎಂಬುದನ್ನು ಶ್ರೀಮಾನ್ ಮೈ. ರಾಮಕೃಷ್ಣರವರು ಭಾಷಣ ಮಾಡುವಾಗ್ಗೆ ಕೊಟ್ಟಿರತಕ್ಕಂಥ ಅಂಕಿ ಅಂಶಗಳಿಂದ ಸ್ಪಷ್ಟವಾಗಿ ಗೊತ್ತಾಗುತ್ತದೆ. ಹಾಗಾದರೆ ಅಡಳಿತ ವಹಿಸಿಕೊಂಡು ಅಧಿಕಾರದಲ್ಲಿರತಕ್ಕಂಥ ಮಂತ್ರಿ ಮಂಡಳ ಅಥವಾ ಶ್ರೇಷ್ಠ ಅಧಿಕಾರಿಗಳು ಈ ಬಗ್ಗೆ ತಾತ್ಸಾರವುಳ್ಳವರಾಗಿದ್ದಾರೆಯೇ? ಈ ನಿರ್ಣಯವನ್ನು ಅವರು ಸರಿಯಾಗಿ ಅರ್ಥ ಮಾಡಿಕೊಂಡಿರುವುದಿಲ್ಲವೇ? ಅವರನ್ನು ಯಾರೂ ಕೇಳುವವರು ಇಲ್ಲವೇ? ಅನುಮಾನ ಬರುವ ಹಾಗೆ ಕ್ರಮ ನಡೆದಿರುವುದರಿಂದ ಹೆಚ್ಚುನೊಂದುಕೊಳ್ಳುವ ಹಾಗೆ ಆಗಿದೆ, ಇದರಲ್ಲಿ ಏನೂ ಅನುಮಾನ ಇಲ್ಲ. ಇವತ್ತಿನ ದಿವಸ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಒಂದು ಪಟ್ಟಿ ಕೊಟ್ಟಿದ್ದಾರೆ. ಬಹಳ ಹುದ್ದೆಗಳಿಗೆ ಪ್ರಮೋಷನ್ ಮೂಲಕ ನೇರವಾಗಿ ನೇಮಕ ಮಾಡುವ ಮೂಲಕ ಏರ್ಪಾಡು ಮಾಡಿದ್ದಾರೆ. ಇದರಲ್ಲಿ ಹರಿಜನರಿಗೆ ಗಿರಿಜನರಿಗೆ ಹಿಂದುಳಿದವರಿಗೆ ಬರಬೇಕಾದ ಭಾಗ ಬಂದಿದೆಯೇ ಎಂದರೆ ಸಂಪೂರ್ಣವಾಗಿ ಅನುಮಾನವಾಗುವುದೇ ಅಲ್ಲದೆ ಶ್ರೇಷ್ಠ ನ್ಯಾಯಾಲಯದ ತೀರ್ಮಾನವನ್ನು ಜಾರಿ ಮಾಡುವುದನ್ನು ಕೂಡ ಬಿಟ್ಟುಬಿಟ್ಟಿದ್ದಾರೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಎಷ್ಟು ಪ್ರಮಾಣದಲ್ಲಿ ಹರಿಜನರಿಗೆ, ಗಿರಿಜನರಿಗೆ ದೊರೆಯಬೇಕೋ ಅಷ್ಟು ದೊರೆತಿಲ್ಲ. ದಕ್ಷತೆಗೆ ತೊಂದರೆ ಬರುತ್ತದೆಂದು ಕೈಕೆಳಗಿನ ಅಧಿಕಾರಿಗಳು ಹೇಳುತ್ತಾರೆ ಎಂದು ಸಾಧಾರಣವಾಗಿ ಕ್ಲಾಕ್ಸ್ ಹುದ್ದೆಗಳನ್ನು ಕೊಡುತ್ತಾರೆ. ದಕ್ಷತೆ ಉಳಿಸಿಕೊಳ್ಳುವ ನೆಪದಲ್ಲಿ ನುಪ್ಪೀಂ ಕೋರ್ಟು ತೀರ್ಮಾನ ಕೊಟ್ಟಿರುವುದನ್ನು ನ್ಯಾಯವಾಗಿ ಪರಿಪಾಲಿಸಲು ಸಾಧ್ಯವಾಗಿಲ್ಲ, ಇದು ವಿಷಾದಕರ. ಅನೇಕರು ಹಿಂದುಳಿದವರಲ್ಲಿ ಕಾಲೇಜು ಅಭ್ಯಾಸ ಮುಗಿಸಿಕೊಂಡು ಗ್ರಾಜ್ಯುಯೇಟ್ಸ್, ಡಬ್ಬರ್ ಗ್ರಾಜ್ಯುಯೇಟ್ಸ್ ಆಗಿದ್ದಾರೆ. ಟೆಕ್ನಿಕಲ್ ಕ್ವಾಲಿಫಿಕೇಷನ್ಸ್ ಪಡೆದಿದ್ದಾರೆ. ಅನೇಕರು ಪರದೇಶಗಳಿಗೆ ಹೋಗಿ ಶ್ರೇಷ್ಠತರ ಡಿಗ್ರಿ ಪಡಕೊಂಡು ಬಂದವರಾಗಿದ್ದಾರೆ. ನವರ್ಣ ವರ್ಗದವರಷ್ಟೇ ದಕ್ಷತೆಯುಳ್ಳವರಾಗಿದ್ದಾರೆ. ಇಪ್ಪತ್ತು ಇಪ್ಪತ್ತೈದು ವರ್ಷ ಕೆಲಸ ಮಾಡಿದಂಥವರಾಗಿದ್ದಾರೆ. ಇವರು ಅಧಿಕಾರದ ಹುದ್ದೆ ಪಡೆಯಲು ಅರ್ಹತೆಯುಳ್ಳವರಾಗಿದ್ದಾರೆ. ಈ ರೀತಿ ಇದ್ದರೂ ಕೂಡ ದೊಡ್ಡ ದೊಡ್ಡ ಹುದ್ದೆಗಳಿಗೆ ಹಿಂದುಳಿದವರನ್ನು ಏರಿಸುತ್ತಿಲ್ಲ. ಪ್ರಮೋಷನ್ ಕೊಡುವುದು ಬಂದಾಗ್ಗೆ ಇವರದು ಮಾತ್ರ ರಿಕಾರ್ಡ್ಸ್ ತೆಗೆದು ನೇರವಾಗಿ ಬೇರೆಯವರನ್ನು ಅಂಥ ದೊಡ್ಡ ಹುದ್ದೆಗಳಿಗೆ ಏರಿಸುತ್ತಾರೆ. ಕೆಳಗಿನ ಹುದ್ದೆಗಳಲ್ಲಿರುವ ಹಿಂದುಳಿದವರಿಗೆ ಆ ದೊಡ್ಡ ಹುದ್ದೆಗಳನ್ನು ಕೊಡುವುದಿಲ್ಲ. ಇದನ್ನು ಸರಕಾರ ಯೋಚನೆ ಮಾಡಬೇಕು. ಹರಿಜನರು ಗಿರಿಜನರು ಎಂದು ನಾನು ಒತ್ತಿ ಒತ್ತಿ ಹೇಳುತ್ತೇನೆ. ಷೆಡ್ಯೂರ್ ಕ್ಯಾಸ್ಟ್ಸ್ ಎಂದು ಹೇಳುತ್ತಿಲ್ಲ. ಏಕೆಂದರೆ ಹೊಸ ಪೈಸ್ಟನೂರಿನಲ್ಲಿ ಷೆಡ್ಯೂಲ್ ಕ್ಯಾಸ್ಟ್‌ನಲ್ಲಿ ಜೋಪ್ತಿ ಲಂಬಾಣಿ, ಕೊರವರು ಇವರನ್ನು ಸೇರಿಸಿವೆ ಬಿಟ್ಟಿದ್ದಾರೆ ಸೇರಿಸಬೇಕೆಂಬ ಭಾವನೆ ಇಟ್ಟುಕೊಂಡಿದ್ದಾರೆಂದು ಕಾಣುತ್ತದೆ. ಮೇಧಾ ಶಕ್ತಿಯುಳ್ಳಂಥ ಎಂಜಿನೀಯರ್ಸು ಇದ್ದಾರೆ. ಹರಿಜನ ಗಿರಿಜನರಲ್ಲಿ ಇಲ್ಲಾ ಎನ್ನತಕ್ಕಂಥಾದ್ದು ಬರೀ ಊಹೆಯಾಗಿದೆ. ಅದು ಸಂಪೂರ್ಣ ತಪ್ಪು ಎಂದು ನಾನು ಹೇಳುತ್ತೇನೆ. ಮೋಸ ಮಾಡಿ ಅವರಿಗೆ ದಕ್ಷತೆ ಇದೆ, ಇವರಿಗೆ ದಕ್ಷತೆ ಇಲ್ಲ ಎಂದು ತೋರಿಸಬಹುದು. ಹಿಂದುಳಿದವರಲ್ಲಿ ಮುಂದುವರಿದವರಷ್ಟೆ ದಕ್ಷತೆ ಇದೆ, ಕೆಲಸ ಮಾಡುವ ಶಕ್ತಿ ಇದೆ, ಯಾವುದರಲ್ಲಿಯೂ ಕಡಿಮೆ ಇಲ್ಲ ಎಂದು ನಾನು ಮನುಷ್ಯ ಪರೀಕ್ಷೆ ಮಾಡಿ ಮಾನಶಾಸ್ತ್ರ ಪ್ರಯೋಗದಿಂದ ತೋರಿಸಬಲ್ಲೆ ಎಂದು ಈ ಸಭೆಯ ಮುಂದೆ ಹೇಳುತ್ತೇನೆ. ಹರಿಜನರನ್ನು ಗಿರಿಜನರನ್ನು ಬಿಟ್ಟು ನೇರವಾಗಿ ಪ್ರಮೋಷನ್‌ನಿಂದ ಹುದ್ದೆಗಳನ್ನು ತುಂಬಿರುವುದನ್ನು ಜಾಗ್ರತೆ ಸರಿಪಡಿಸಬೇಕೆಂದು ಪುರಂದ್ರಿಮಂಡಳವನ್ನು ಕೇಳಿಕೊಳ್ಳು

ತ್ತೇನೆ. ಕಳೆದ ಎರಡು ವರ್ಷಗಳಿಂದ ಈಡೆಗೆ ಲೋಕಲ್ ಕ್ಯಾಂಡಿಡೇಟ್ಸ ನೇಮಕ ಮಾಡಿಕೊಳ್ಳುತ್ತಿದ್ದಾರೆ. ಈ ನೇಮಕ ಮಾಡುವುದರಲ್ಲಿ ಹಿಂದುಳಿದವರನ್ನು ತೆಗೆದುಕೊಂಡಿಲ್ಲ ಎಂದು ಬಹಳ ವಿಷಾದದಿಂದ ಹೇಳುತ್ತೇನೆ. ಸರಕಾರ ದಯವಿಟ್ಟು ಕಣ್ಣಲ್ಲಿ ಕಣ್ಣು ಇಟ್ಟು ಇದರ ಪಟ್ಟಿ ತರಿಸಿ ನೋಡಬೇಕು. ಲೋಕಲ್ ಕ್ಯಾಂಡಿಡೇಟ್ಸ ನೇಮಕದಲ್ಲಿ ಷೆಡ್ಯೂಲ್ ಕ್ಯಾಸ್ಟಿನವರನ್ನು ಸೇರಿಸಿ ನೇಮಕ ಮಾಡಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಂಡು ಒಂದು ವೇಳೆ ಕಡಿಮೆಯಾಗಿರತಕ್ಕಂಥಾದ್ದನ್ನು ಷೆಡ್ಯೂಲ್ಡ ಕ್ಯಾಸ್ಟಿನವರಿಂದ ತುಂಬಬೇಕೆಂದು ಹೇಳುತ್ತೇನೆ.

Mr. DEPUTY SPEAKER.—The Hon'ble member may continue his speech next day. The House will rise now and will meet at 12-30 P M. on Monday, the 30th September 1963.

The House adjourned at Thirty Minutes past Twelve of the Clock to meet again at Thirty Minutes past Twelve of the Clock on Monday, the 30th September 1963.